
ಜನಮನದ ದನಿ

# ಪ್ರಜೋದಯ

ಸಂಪಾದಕ : ಜಿ.ಆರ್. ಕೆಂಚೇಗೌಡ

14 ಫೆಬ್ರವರಿ 2026 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 330 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಗೆ ರಾಜಸ್ಥಾನ ರಾಯಲ್ಸ್ ತಂಡದ ನಾಯಕರಾಗಿ ಯುವ ಆಲ್ ರೌಂಡರ್ ರಿಯಾನ್ ಪರಾಗ್ ಅವರನ್ನು ಆಯ್ಕೆಮಾಡಿದೆ.


ಅದೃಶ್ಯ-ಅಗೋಚರ : ಸಂಪರ್ಕ ಮಾಧ್ಯಮ, ವಾಸನಾ ದ್ರವ್ಯಗಳು » 2


ದಂಡ ಕಟ್ಟದ ಕೆಎಸ್‌ಆರ್‌ಟಿಸಿ ಬಸ್‌ಗಳ ಜಪ್ತಿ » 3


ಚ.ರಾ.ಪಟ್ಟಣ : ತಾಯಿ-ಮಕ್ಕಳ ಆಸ್ಪತ್ರೆಗೆ ಮನವಿ » 4

# ಬಿಪಿಎಲ್ ಕಾರ್ಡ್ ಬೇಕಾಬಿಟ್ಟಿ ರದ್ದು ಬೇಡ

## ಸೂಕ್ಷ್ಮವಾಗಿ ಪರಿಶೀಲಿಸಿ ಕ್ರಮಕ್ಕೆ ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಸೂಚನೆ

• ಪ್ರಜೋದಯ ವರದಿ

**ಹಾಸನ :** ರಾಜ್ಯದಲ್ಲಿ 7ಲಕ್ಷಕ್ಕಿಂತ ಹೆಚ್ಚು ಅನರ್ಹ ಬಿಪಿಎಲ್ ಕಾರ್ಡ್‌ಗಳಿವೆ ಎಂದು ಕೇಂದ್ರ ಸರ್ಕಾರ ಅಂದಾಜು ಮಾಡಿದ್ದು, ಏಕಾ ಏಕಿ ಎಲ್ಲಾ ಕಾರ್ಡ್‌ಗಳನ್ನು ಎಪಿಎಲ್‌ಗೆ ಪರಿವರ್ತಿಸಲು ಸಾಧ್ಯವಿಲ್ಲ. ಆದಾಯ ತೆರಿಗೆ ಪಾವತಿಸುತ್ತಾರೆಂಬ ಕಾರಣಕ್ಕೆ ಅಂತಹವರು ಬಿಪಿಎಲ್‌ಗೆ ಅನರ್ಹರಲ್ಲವೆಂದು ಭಾವಿಸಬಾರದು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಹೆಚ್.ಮುನಿಯಪ್ಪ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಆಹಾರ ಮತ್ತು ನಾಗರಿಕ ಸರಬರಾಜು, ಕಾನೂನು ಮಾಪನ ಶಾಸ್ತ್ರ ಹಾಗು ಆಹಾರ ನಿಗಮ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯ



ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬೇಕಾಬಿಟ್ಟಿ ಬಿಪಿಎಲ್ ಕಾರ್ಡ್ ಗಳನ್ನು ರದ್ದು ಮಾಡಿದರೆ ಜನರ ಆಕ್ರೋಶಕ್ಕೆ ಗುರಿಯಾಗಬೇಕಾಗುತ್ತದೆ. ಕಾರ್ಡ್ ಪರಿಷ್ಕರಣೆ ವೇಳೆ ಮನೆ ಹಾಗು ಬೈಕ್ ಸಾಲ ಸೇರಿ ವಿವಿಧ ಸವಲತ್ತಿಗಾಗಿ ಜನರು ಆದಾಯ ತೆರಿಗೆ ಪಾವತಿಸುತ್ತಾರೆ. ಅಂತವಹರನ್ನು ಶ್ರೀಮಂತರ ಪಟ್ಟಿಗೆ ಸೇರಿಸಿ ಬಿಪಿಎಲ್ ಕಾರ್ಡ್‌ನಿಂದ ವಂಚಿತರನ್ನಾಗಿಸುವುದು ಬೇಡವೆಂದು ಸೂಚಿಸಿದರು.

ಜಿಲ್ಲೆಯಲ್ಲಿ 2,396 ಬಿಪಿಎಲ್ ಕಾರ್ಡ್‌ಗಳು ಈ ರೀತಿ ಪರಿಷ್ಕರಣೆಯಲ್ಲಿವೆ. ಈಗಾಗಲೇ ಬಿಪಿಎಲ್‌ನಿಂದ ಎಪಿಎಲ್‌ಗೆ ಪರಿವರ್ತಿಸಿದ್ದರೆ ಅಗತ್ಯ ದಾಖಲೆಗಳನ್ನು ಪಡೆದು ಬಿಪಿಎಲ್ ಕಾರ್ಡ್ ನೀಡಲು ಮರು ಪರಿಶೀಲನೆ ನಡೆಸಬೇಕು. ಕುಟುಂಬದ ಮಕ್ಕಳು ಬೇರೆ ಕಡೆ ಕೆಲಸ ಮಾಡಿಕೊಂಡು ಆದಾಯ ತೆರಿಗೆ ಪಾವತಿಸುತ್ತಿದ್ದರೆ ತಂದೆ-ತಾಯಿಗೆ ಬಿಪಿಎಲ್ ಕಾರ್ಡ್ ನೀಡಬಹುದು. ಈ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸಬೇಕು. ಬಿಪಿಎಲ್‌ಗೆ ಅರ್ಹರಾಗಿದ್ದರೂ ಎಪಿಎಲ್‌ಗೆ ಬದಲಾಗಿದ್ದರೆ ಅಂತಹವರು ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿದರೆ 15 ದಿನಗಳೊಳಗೆ ಸಮಸ್ಯೆ ಪರಿಹಾರವಾಗಲಿದೆ ಎಂದು ಭರವಸೆ ನೀಡಿದರು.

**ಅನ್ನ ಸುವಿಧಾ ಸಮರ್ಪಕ ಅನುಷ್ಠಾನವಾಗಲಿ**

75 ವರ್ಷ ಮೀರಿದ ನಾಗರಿಕರ ಮನೆಗಳಿಗೆ ಪಡಿತರ ತಲುಪಿಸಲು ಅನ್ನ ಸುವಿಧಾ ಯೋಜನೆ ಜಾರಿಗೊಳಿಸಿದ್ದು, ಅದರಿಂದ ಯಾರೂ ಹೊರಗುಳಿಯಬಾರದು. ಮಕ್ಕಳು ಉದ್ಯೋಗದ ನಿಮಿತ್ತ ಬೇರೆ ಕಡೆ ಇದ್ದರೆ, ವಯಸ್ಕರು ಏಕಾಂಗಿಯಾಗಿದ್ದರೆ ಅಂತಹವರ ಮನೆಗೆ ಪಡಿತರ ತಲುಪಿಸಲಾಗುತ್ತಿದೆ. ಜಿಲ್ಲೆಯಲ್ಲಿ 15 ಸಾವಿರ ನಾಗರಿಕರಿದ್ದು, 10 ಸಾವಿರ ಜನರು ಮೊಬೈಲ್ ಹೊಂದದೆ ಕಾರಣಕ್ಕೆ ಯೋಜನೆಯಿಂದ ವಂಚಿತರಾಗಿದ್ದಾರೆ. 148 ಜನರು ಮೃತಪಟ್ಟಿದ್ದಾರೆ. 2,750 ಫಲಾನುಭವಿಗಳಿಗೆ ಯೋಜನೆ ಲಾಭ ದೊರೆಯುತ್ತಿದೆ. ಇನ್ನು 2,112 ಜನರ ಮನೆಗೆ ಆಹಾರ ಪದಾರ್ಥ ತಲುಪಬೇಕಿದ್ದು, ಅಧಿಕಾರಿಗಳು ಮುತುವರ್ಜಿ ವಹಿಸಬೇಕು. ನ್ಯಾಯಬೆಲೆ ಅಂಗಡಿಯವರು ಮನೆ ಬಾಗಿಲಿಗೆ ಪಡಿತರ ವಿತರಣೆ ಮಾಡಬೇಕೆಂದರು.

ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಜಿಲ್ಲೆಗೆ 10 ಸಾವಿರ ಮೆಟ್ರಿಕ್ ಟನ್ ರಾಗಿ ಖರೀದಿ ಗುರಿ ನೀಡಲಾಗಿದೆ. ಮಾ.31ರ ವರೆಗೆ ಮಾರಾಟ ಮಾಡಬಹುದು. ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಆಹಾರ ಇಲಾಖೆಯ ಜಂಟಿ ನಿರ್ದೇಶಕರು ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ನಿರ್ದೇಶನ ನೀಡಿದರು.

ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿ, ಪಂಗಡದ

» 3ನೇ ಪುಟದಲ್ಲಿ

# ಹೊ.ನ.ಪುರ ಕ್ರೀಡಾಂಗಣ ಅಭಿವೃದ್ಧಿಗೆ ಕೋರಿಕೆ

## ಕೇಂದ್ರ ಕ್ರೀಡಾ ಸಚಿವರಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮನವಿ

• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿಗೆ 9 ಕೋ.ರೂ. ಹಾಗು ಮೊಸಳೆ ಹೊಸಹಳ್ಳಿಯ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಆವರಣದಲ್ಲಿ ಹೊರಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ 15 ಕೋ.ರೂ. ಅನುದಾನ ಮಂಜೂರು ಮಾಡುವಂತೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರಿಗೆ ಮನವಿ ಸಲ್ಲಿಸಿದರು.

ತಮ್ಮ ಸ್ವಗ್ರಾಮ ಹೊಳೆನರಸೀಪುರ ತಾಲ್ಲೂಕು ಕ್ರೀಡಾಂಗಣದಲ್ಲಿ ಸಂಪೂರ್ಣ ಸೌಲಭ್ಯ ಕಲ್ಪಿಸಬೇಕಿದೆ. ಅಥ್ಲೆಟಿಕ್ ಮೈದಾನಕ್ಕೆ ಟರ್ಫ್ ಅಭಿವೃದ್ಧಿಗೆ 80 ಲ.ರೂ., ಬಾಸ್ಕೆಟ್ ಬಾಲ್ ಮೈದಾನ ಅಭಿವೃದ್ಧಿಗೆ 40 ಲ.ರೂ., ವಾಲಿಬಾಲ್ ಮೈದಾನಕ್ಕೆ 30 ಲ.ರೂ., ಹೈ ಜಂಪ್, ಲಾಂಗ್ ಜಂಪ್, ಜಾವೆಲಿನ್ ಥ್ರೋ, ಶಾಟ್ ಪುಟ್, ಹ್ಯಾಮರ್, ಡಿಸ್ಕಸ್ ಥ್ರೋ ಹಾಗು ಮೂಲಸೌಕರ್ಯಕ್ಕಾಗಿ



1.50 ಕೋ.ರೂ., ಕ್ರಿಕೆಟ್, ಹಾಕಿ ಮೈದಾನ, ಒಳಾಂಗಣ ಕ್ರೀಡಾಂಗಣ ಅಭಿವೃದ್ಧಿಗೆ 4.50 ಕೋ.ರೂ., ಭದ್ರತಾ ಉದ್ದೇಶಕ್ಕಾಗಿ ಕಾಂಪೌಂಡ್ ಗೋಡೆಗೆ 75 ಲ.ರೂ., ಬೆಳಕು ವ್ಯವಸ್ಥೆಗೆ 75 ಲ.ರೂ. ಸೇರಿ ಒಟ್ಟು ಅಂದಾಜು ವೆಚ್ಚ 9 ಕೋ.ರೂ. ಮಂಜೂರು ಮಾಡುವಂತೆ ಮನವಿ ಮಾಡಿದ್ದಾರೆ.

ಮೊಸಳೆ ಹೊಸಹಳ್ಳಿಯ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಹೊರಾಂಗಣ ಕ್ರೀಡಾಂಗಣ ನಿರ್ಮಾಣಕ್ಕಾಗಿ 15 ಕೋ.ರೂ. ಅನುದಾನ ಮಂಜೂರು ಮಾಡುವಂತೆ ಮನವಿ ಸಲ್ಲಿಸಿದ ದೇವೇಗೌಡರು, 2019-20ನೇ ಶೈಕ್ಷಣಿಕ ವರ್ಷದಲ್ಲಿ ಸ್ಥಾಪಿತವಾದ ಈ ಕಾಲೇಜು ಅಲ್ಪಾವಧಿಯಲ್ಲಿ ತಾಂತ್ರಿಕ ಶಿಕ್ಷಣದ ಪ್ರಮುಖ ಕೇಂದ್ರವಾಗಿ ಬೆಳೆಯುತ್ತಿದೆ. ಗ್ರಾಮೀಣ ಯುವಕರಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶದಿಂದ ಆರಂಭವಾದ ಈ ಸಂಸ್ಥೆ ಶೈಕ್ಷಣಿಕವಾಗಿ ಗಮನಾರ್ಹ ಪ್ರಗತಿ ಸಾಧಿಸಿದೆ. ಹೀಗಾಗಿ ಫಿಟ್ ಇಂಡಿಯಾ ಮತ್ತು ಖೇಲೋ ಇಂಡಿಯಾ ಯೋಜನೆಗಳ ತತ್ವಗಳನ್ನು ಗ್ರಾಮೀಣ ಪ್ರದೇಶದಲ್ಲಿ ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಬ್ಯಾಡ್ಮಿಂಟನ್, ಟೇಬಲ್ ಟೆನಿಸ್, ವಾಲಿಬಾಲ್ ಸೇರಿ ವಿವಿಧ ಕ್ರೀಡೆಗಳಲ್ಲಿ ತರಬೇತಿ ಪಡೆಯಲು ಕ್ರೀಡಾಂಗಣ ಅವಶ್ಯಕವಾಗಿದೆ ಎಂದು ತಿಳಿಸಿದ್ದಾರೆ.

# 37 ಸಾವಿರ ಕೋ.ರೂ. ಬಿಲ್ ಬಾಕಿ: ಹೋರಾಟಕ್ಕಿಳಿದ ಗುತ್ತಿಗೆದಾರರು

## ಶೀಘ್ರ ಹಣ ಬಿಡುಗಡೆ ಮಾಡದಿದ್ದರೆ ಕಾಮಗಾರಿ ಸ್ಥಗಿತ: ಮಂಜುನಾಥ್ ಎಚ್ಚರಿಕೆ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರ ಗುತ್ತಿಗೆದಾರರಿಗೆ ಪಾವತಿ ಮಾಡಬೇಕಿರುವ 37 ಸಾವಿರ ಕೋ.ರೂ. ಹಣವನ್ನು ಶೀಘ್ರ ಬಿಡುಗಡೆ ಮಾಡದಿದ್ದರೆ ರಾಜ್ಯಾದ್ಯಂತ ಎಲ್ಲಾ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಹೋರಾಟ ನಡೆಸಲಾಗುವುದೆಂದು ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಮಂಜುನಾಥ್ ಅವರು ಎಚ್ಚರಿಕೆ ನೀಡಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 3 ವರ್ಷಗಳ 37 ಸಾವಿರ ಕೋ.ರೂ. ಬಾಕಿ ನೀಡಲು ಕಾಂಗ್ರೆಸ್ ಸರ್ಕಾರ ಬಂದಾಗಿನಿಂದಲೂ ಒತ್ತಾಯಿಸಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಲ್ಲದೇ ವಿವಿಧ ಇಲಾಖೆಗೆ ಭೇಟಿ ನೀಡಿ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲವೆಂದು ದೂರಿದರು.

ಹಿಂದೆ ಇದೇ ಮುಖ್ಯಮಂತ್ರಿ ಅವರು ನಮ್ಮ ಬೇಡಿಕೆಗೆ ಸ್ಪಂದಿಸಿದ್ದರು. ಈಗ ಹಿಂದಿನ ಸರ್ಕಾರದ ಬಾಕಿ ಎಂದು ಹೇಳಿ, ತಾತ್ಸಾರ ಮಾಡು



**ಜಿಲ್ಲೆಯಲ್ಲಿ 1,200 ಕೋ.ರೂ. ಬಾಕಿ**

**ಲೋಕೋಪಯೋಗಿ ಇಲಾಖೆಯಲ್ಲಿ 8 ಸಾವಿರ ಕೋ.ರೂ., ಜಲಸಂಪನ್ಮೂಲ ಇಲಾಖೆಯಲ್ಲಿ 13 ಸಾವಿರ ಕೋ.ರೂ., ಸಣ್ಣ ನೀರಾವರಿ ಇಲಾಖೆಯಲ್ಲಿ 3 ಸಾವಿರ ಕೋ.ರೂ., ಹೀಗೆ ಒಟ್ಟು 37 ಸಾವಿರ ಕೋ.ರೂ. ಬಾಕಿ ಬರಬೇಕು. ಜಿಲ್ಲೆಗೆ ಸಂಬಂಧಿಸಿದಂತೆ ನೀರಾವರಿ ಇಲಾಖೆ 380 ಕೋ.ರೂ., ಲೋಕೋಪಯೋಗಿ ಇಲಾಖೆ 281 ಕೋ.ರೂ., ಸಣ್ಣ ನೀರಾವರಿ 120 ಕೋ.ರೂ.ಸೇರಿ ಸುಮಾರು 1200 ಕೋ.ರೂ. ಬಾಕಿ ಬರಬೇಕೆಂದು ಹೇಳಿದರು.**

ತ್ತಿದ್ದಾರೆ. ಮಾ.5 ರಂದು 30 ಸಾವಿರ ಜನರು ಸೇರಿ ಬೆಂಗಳೂರಿನಲ್ಲಿ ಬೃಹತ್ ಹೋರಾಟಕ್ಕೆ ನಿರ್ಧರಿಸಿದ್ದೇವೆ. ಬಳಿಕವೂ ಸರ್ಕಾರ ಸ್ಪಂದಿಸದಿದ್ದರೆ ರಾಜ್ಯಾದ್ಯಂತ ಎಲ್ಲಾ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಹೋರಾಟ ಆರಂಭಿಸುತ್ತೇವೆಂದು ಎಚ್ಚರಿಕೆ ನೀಡಿದರು.

ರಾಜ್ಯಾದ್ಯಂತ ಸುಮಾರು ಒಂದೂವರೆ ಲಕ್ಷ ಗುತ್ತಿಗೆದಾರರಿದ್ದು, ನಮಗೆ ರಾಜಕೀಯದವರ ಬೆಂಬಲ ಬೇಡ. ಸರ್ಕಾರದ ಸ್ಪಂದನೆ ನೋಡಿ ಮುಂದೇನು ಮಾಡಬೇಕೆಂಬುದನ್ನು ತೀರ್ಮಾನ ಮಾಡುತ್ತೇವೆ. ಅಗತ್ಯವಿದ್ದರೆ ಕುಟುಂಬ ಸದಸ್ಯರನ್ನೂ ಹೋರಾಟಕ್ಕಿಳಿಸುತ್ತೇವೆಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಸಂಘದ ಪದಾಧಿಕಾರಿಗಳಾದ ಶಾಂತೇಗೌಡ, ಮಂಜುನಾಥ್, ಜಗದೀಶ್, ಹಾಸನ ಜಿಲ್ಲಾಧ್ಯಕ್ಷ ಜ್ಞಾನೇಶ್ ಇತರರಿದ್ದರು.

# ಕಾಮಗಾರಿ ಪರಿಶೀಲನೆ ವೇಳೆ ಬಿ.ಶಿವರಾಮ್‌ಗೆ ಆಕ್ರೋಶದ ಬಿಸಿ

• ಪ್ರಜೋದಯ ವರದಿ

**ಬೇಲೂರು :** ಪಟ್ಟಣದ 9ನೇ ವಾರ್ಡ್‌ನ ವೈಕುಂಠ ಬೀದಿಯಲ್ಲಿ ನಡೆಯುತ್ತಿರುವ ರಸ್ತೆ, ಚರಂಡಿ ಕಾಮಗಾರಿ ಪರಿಶೀಲನೆಗೆ ಬಂದಿದ್ದ ಮಾಜಿ ಸಚಿವ ಬಿ.ಶಿವರಾಮ್ ಅವರಿಗೆ ಸ್ಥಳೀಯರ ಆಕ್ರೋಶದ ಬಿಸಿ ತಟ್ಟಿತು.

ಪುರಸಭೆ ಸದಸ್ಯ ಜಗದೀಶ್ ಹಾಗು ಬಿಜೆಪಿ ಕಾರ್ಯಕರ್ತರು ಇತರರು ಮಾಜಿ ಸಚಿವರ ವಿರುದ್ಧ ನೇರ ವಾಗ್ದಾಳಿ ನಡೆಸಿದರು. ಒಳ್ಳೆಯ ಕೆಲಸ ನಡೆಯುತ್ತಿರುವಾಗ ಅದಕ್ಕೆ ಕೊಕ್ಕೆ ಹಾಕಲು ನೀವು ಬಂದಿದ್ದೀರಾ. ಈ ವಾರ್ಡ್ ಅಭಿವೃದ್ಧಿ ಬಗ್ಗೆ ನೀವು ತಲೆ ಕೆಡಿಸಿಕೊಳ್ಳಬೇಡಿ. ತಾಲ್ಲೂಕಿನಲ್ಲಿ ನೂರಾರು ಸಮಸ್ಯೆಗಳಿದ್ದು, ಆ ಕಡೆಗೆ ಗಮನ ಕೊಡಿ ಎಂದು ತರಾಟೆಗೆ ತೆಗೆದುಕೊಂಡರು.

ಮೊದಲು ಚನ್ನಕೇಶವ ದೇವಾಲಯ ಆವರಣದಲ್ಲಿರುವ ಅಪಾಯಕಾರಿ ರಂಗ ಮಂಟಪವನ್ನು ಸುಧಾರಿಸಲು ಗಮನ ಹರಿಸಬೇಕು. ಅಭಿವೃದ್ಧಿ ಕೆಡಿಸಲು ಯತ್ನಿಸಬೇಡಿ, ಇಲ್ಲಿಂದ ತೆರಳಿ ಎಂದರು.

ದೇವಾಲಯದ ಆವರಣದಲ್ಲಿರುವ ರಂಗ ಮಂಟಪ ಬೀಳುವ ಸ್ಥಿತಿಯಲ್ಲಿದ್ದು, ಯಾವ ಕ್ಷಣದಲ್ಲಾದರೂ



ಅಪಾಯ ಸಂಭವಿಸಬಹುದು. ಭಯದ ವಾತಾವರಣದಲ್ಲಿ ಬದುಕುತ್ತಿದ್ದೇವೆ. ರಾಜ್ಯದಲ್ಲಿ ನಿಮ್ಮದೇ ಸರ್ಕಾರವಿದೆ. ಅದನ್ನು ಅಭಿವೃದ್ಧಿ ಪಡಿಸುವ ಕೆಲಸ ಮಾಡಿ. ಅದನ್ನು ಬಿಟ್ಟು ಅಭಿವೃದ್ಧಿಗೆ ಅಡ್ಡಗಾಲು ಹಾಕುವುದು ಬೇಡವೆಂದರು. ಇದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಮಾಜಿ ಸಚಿವ ಬಿ.ಶಿವರಾಮ್ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ವೈಕುಂಠ ಬೀದಿಯಲ್ಲಿ ನಡೆಯುತ್ತಿರುವ ಕಾಮಗಾರಿಯಲ್ಲಿ ಗುಣಮಟ್ಟ ಕಾಪಾಡಿಕೊಂಡಿಲ್ಲವೆಂದು ಇಂಜಿನೀಯರ್ ಹೇಳಿದ್ದರು. ಸತ್ಯ ತಿಳಿಯಲೆಂದು ಸ್ಥಳಕ್ಕೆ ಭೇಟಿ ನೀಡಿದಾಗ ಕಳಪೆ ಕಾಮಗಾರಿ ಬಯಲಾಗಿದೆ. ಸರಿಯಾಗಿ ಜೆಲ್ಲಿ ಹಾಕಿಲ್ಲ. ಚರಂಡಿ ಕಾಮಗಾರಿಯಲ್ಲೂ ಲೋಪ ಎಸಗಿದ್ದಾರೆ. ಪಾರದರ್ಶಕ ಕಾಮಗಾರಿ ಮಾಡಿದ್ದನ್ನು ತೋರಿಸುವ ಬದಲು ಕೆಲವರು ಗಲಾಟೆ ಮಾಡುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿ ಕೆಲವರು ಮಾತನಾಡಲು ಬಿಡುತ್ತಿಲ್ಲ. ಕೆಂಪೇಗೌಡ ವೃತ್ತ, ಕಾಂಗ್ರೆಸ್ ಕಚೇರಿ ಮುಂಭಾಗದ ಕಾಮಗಾರಿ ಏಕೆ ಪ್ರಶ್ನಿಸುತ್ತಿಲ್ಲ ಎನ್ನುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಅಲ್ಲಿಯ ಕಾಮಗಾರಿಯನ್ನೂ ಪ್ರಶ್ನಿಸುತ್ತೇನೆಂದರು. ಬೇಲೂರು- ಹಳೇಬೀಡು ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶ್ರೀನಿವಾಸ್ ಇತರರಿದ್ದರು.

# ಅಧಿಕಾರ ಹಂಚಿಕೆ ನಮ್ಮ ಮಟ್ಟದಲ್ಲಿಲ್ಲ

• ಪ್ರಜೋದಯ ವರದಿ

**ಹಾಸನ:** ರಾಜಕೀಯ ಬದಲಾವಣೆ, ಅಧಿಕಾರ ಹಂಚಿಕೆ ನಮ್ಮ ಮಟ್ಟದಲ್ಲಿಲ್ಲ, ಹೈಕಮಾಂಡ್ ನೋಡಿಕೊಳ್ಳುತ್ತದೆ ಎಂದು ಸಚಿವ ಕೆ.ಹೆಚ್.ಮುನಿಯಪ್ಪ ಅವರು ಹೇಳಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ ಅವರು, ಅಧಿಕಾರ ಹಂಚಿಕೆ ಸಂಬಂಧ ಹೈಕಮಾಂಡ್ ನಿರ್ಧಾರಕ್ಕೆ ಬದ್ಧವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಉಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿರುವುದರಿಂದ ಈ ಬಗ್ಗೆ ಯಾರೂ ಪ್ರಶ್ನೆ ಮಾಡುವಂತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತಮ ಆಡಳಿತ ನೀಡುತ್ತಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ 17ನೇ ಬಜೆಟ್ ಮಂಡಿಸಲಿದ್ದಾರೆಂದು ತಿಳಿಸಿದರು.

ದೆಹಲಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೀಡಿದ ಹೇಳಿಕೆ ಕುರಿತು ಪ್ರಶ್ನಿಸಿದಾಗ, ಹೈ



ಕಮಾಂಡ್ ತೀರ್ಮಾನವೇ ಅಂತಿಮ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಉಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಏನು ಮಾತನಾಡಿ ಕೊಂಡಿದ್ದಾರೆಂಬುದು ನಮಗೆ ತಿಳಿದಿಲ್ಲ. ಸಂಬಂಧಪಟ್ಟವರು ತಾವೇ ಬಗೆಹರಿಸಿಕೊಳ್ಳಲಿ ಎಂದರು.

ಶಾಸಕರ ವಿದೇಶ ಪ್ರವಾಸ ವಿಚಾರಕ್ಕೆ ಪ್ರತಿಕ್ರಿಯಿಸಿ, ಸಚಿವ ವೆಂಕಟೇಶ್ ಅವರು ಈ ಬಗ್ಗೆ ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. ಅದು ವೈಯಕ್ತಿಕ ಪ್ರವಾಸ ಹೋಗಲು ಸ್ವತಂತ್ರರು, ಸರ್ಕಾರಕ್ಕೆ ಸಂಬಂಧವಿಲ್ಲವೆಂದು ಹೇಳಿದರು.

## ಫೆ.17 ರಂದು ಜಿಲ್ಲಾ ಮಟ್ಟದ ಸಭೆ

• ಪ್ರಜೋದಯ ವರದಿ

**ಹಾಸನ :** ಪೊಲೀಸ್ ಇಲಾಖೆ ವತಿಯಿಂದ ಜಿಲ್ಲಾ ಮಟ್ಟದ ಎಸ್‌ಸಿ-ಎಸ್‌ಟಿ ಸಭೆಯಲ್ಲಿ ಫೆ.17 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪೊಲೀಸ್ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸಂಬಂಧ ಪಟ್ಟವರು ಹಾಜರಾಗಿ ಸಭೆಯನ್ನು ಯಶಸ್ವಿಗೊಳಿಸುವಂತೆ ಪೊಲೀಸ್ ಅಧೀಕ್ಷರು ತಿಳಿಸಿದ್ದಾರೆ.

# ಮಾಜಿ ಸೈನಿಕ ಜಗದೀಶ್ ನಿಧನ

• ಪ್ರಜೋದಯ ವರದಿ



**ಹಾಸನ:** ತಾಲ್ಲೂಕಿನ ಕಟ್ಟಾಯ ಹೋಬಳಿ ಸತ್ತೀಗರಹಳ್ಳಿ ಗ್ರಾಮದ ಮಾಜಿ ಸೈನಿಕ ಜಗದೀಶ್ (65) ಶುಕ್ರವಾರ ನಿಧನರಾದರು.

ಭಾರತೀಯ ಸೇನೆಯಲ್ಲಿ ಕೆಲಸ ಮಾಡಿದ್ದ ಅವರು ನಿವೃತ್ತಿ ಬಳಿಕ ಸಿದ್ದಗಂಗಾ ಮಠದಲ್ಲಿ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು. ದಿಢೀರ್ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ ಹಾಗು ಪುತ್ರ ಇದ್ದಾರೆ. ಸತ್ತೀಗರಹಳ್ಳಿ ಗ್ರಾಮದ ಅವರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿತು. ಸಿದ್ದಗಂಗಾ ಮಠದ ಕಿರಿಯ ಸ್ವಾಮೀಜಿ ಶ್ರೀ ಶಿವಸಿದ್ದೇಶ್ವರ, ಕಿರಿಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ಕಲ್ಲುಮಠದ ಶ್ರೀ ಮಹಾಂತ ಸ್ವಾಮೀಜಿ, ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಅಖಿಲ ಭಾರತ ವೀರಶೈವ, ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

# ರಾಜ್ಯದ ಅಭಿವೃದ್ಧಿ ಶೂನ್ಯ: ಸಾವಿರಾರು ಸಮಸ್ಯೆ ಉಲ್ಬಣ

## ಕಾಂಗ್ರೆಸ್ ಸರ್ಕಾರದ ವಿರುದ್ಧ ಛಲವಾದಿ ನಾರಾಯಣಸ್ವಾಮಿ ವಾಗ್ದಾಳಿ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಕಾಂಗ್ರೆಸ್ ಸರ್ಕಾರ ಕೇವಲ ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಲೂಟಿ ಮಾಡುತ್ತಿದೆ. ಸರ್ಕಾರದ ಸಾವಿರ ದಿನಗಳ ಸಂಭ್ರಮಾಚರಣೆ ಸಾವಿರಾರು ಸಮಸ್ಯೆಗಳ ಉಲ್ಬಣಕ್ಕೆ ಕಾರಣವಾಗಿದೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರು ವಾಗ್ದಾಳಿ ನಡೆಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ನಡೆದ ಸುದ್ದಿಗಾರರೊಂದಿಗೆ ಮಾತನಾಡಿ ಅವರು, ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದ್ದು, ದರೋಡೆ, ಕೊಲೆ, ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿವೆ. ಗೃಹಲಕ್ಷ್ಮಿ ಯೋಜನೆಯಡಿ ತಿಂಗಳಿಗೆ 2,000 ರೂ. ನೀಡುವುದಾಗಿ



**"ಯಾರು ಏನೇ ಹೇಳಿಕೆ ನೀಡಲಿ, ಟಿಕೆಟ್ ಕೊಡುವುದು ಬಿಜೆಪಿ ಹೈಕಮಾಂಡ್. ಎಲ್ಲಾ ತೀರ್ಮಾನಗಳು ರಾಷ್ಟ್ರಮಟ್ಟದಲ್ಲಿ ಆಗುತ್ತವೆ. ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಜನತಾದಳ ಪ್ರಭಾವ ಇರುವುದರಿಂದ ಅಪಸ್ವರಗಳು ಸಹಜ. ಅಂತಿಮವಾಗಿ ವರಿಷ್ಠರು ತೀರ್ಮಾನ ಮಾಡುತ್ತಾರೆ.**

**-ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ**

ಘೋಷಿಸಿದ್ದರೂ, ಸರಿಯಾದ ಸಮಯಕ್ಕೆ ಫಲಾನುಭವಿಗಳ ಖಾತೆಗೆ ಜಮೆಯಾಗಿಲ್ಲವೆಂದು ದೂರಿದರು.

ಜನವರಿ, ಫೆಬ್ರವರಿ ತಿಂಗಳ ಹಣ ಏಕೆ ನೀಡಲಿಲ್ಲವೆಂದು ಕೇಳಿದಾಗ ಉತ್ತರ ಕೊಡಲಾಗದೆ ಸಿಕ್ಕಿಬಿದ್ದರು. ಕೇಳಿದರೆ, ಅದು ತಿಂಗಳಿಗೆ ಸಂಬಳವಲ್ಲವೆಂದು ಮಂತ್ರಿಗಳು ಹೇಳುತ್ತಾರೆ. ಗೃಹಲಕ್ಷ್ಮಿ ಹಣ ಕೊಡಬೇಕಾ ದದು ಯಾರಿಗೋ, ಆದರೆ, ಹೋಗಿದ್ದು ಬೆಳಗಾವಿ ಲಕ್ಷ್ಮಿಗೆ ಎಂದು ವ್ಯಂಗ್ಯವಾಡಿದ ಅವರು, ದಲಿತರು ಮತ್ತು ಹಿಂದುಳಿದ ವರ್ಗ ಗಳಿಗೆ ಗ್ಯಾರಂಟಿ ಹಣ ನೀಡಿಲ್ಲ. 42 ಸಾವಿರ ಕೋ.ರೂ. ಪ್ರತ್ಯೇಕವಾಗಿ ಮೀಸಲಿಟ್ಟಿದ್ದೇವೆಂಬುದು ತಪ್ಪು ಮಾಹಿತಿ ಎಂದು ಹೇಳಿದರು.

» ನಾಲ್ಕನೇ ಪುಟದಲ್ಲಿ

# ಮಾದಿಗ ಸಮುದಾಯದ ಸಂಘಟನೆಗೆ ಒತ್ತು ನೀಡಿ

• ಪ್ರಜೋದಯ ವರದಿ

**ಹಾಸನ:** ಮಾದಿಗ ಸಮಾಜದ ಸಂಘಟನೆ ಬಲಪಡಿಸಲು ಸದಸ್ಯತ್ವ ಅಭಿಯಾನಕ್ಕೆ ಒತ್ತು ನೀಡಿ ಯುವಕರು, ಬಡ ಮಕ್ಕಳ ಶಿಕ್ಷಣಾಭಿವೃದ್ಧಿಗೆ ಶ್ರಮಿಸಬೇಕೆಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಹೆಚ್.ಮುನಿಯಪ್ಪ ಅವರು ಸಲಹೆ ನೀಡಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಾದರ ಮಹಾಸಭಾದ ದಾಖಲಾತಿ ಅಭಿಯಾನ ಹಾಗು ಸಮುದಾಯದ ಮುಖಂಡರೊಂದಿಗೆ ಸಮಾಲೋಚನೆ ಮತ್ತು ಮಾದಿಗರ ನೌಕರರ ಸಂಘ ಉದ್ಘಾಟನೆ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬುದ್ಧ, ಬಸವ, ಅಂಬೇಡ್ಕರ್ ಅವರು ಸಮಾನತೆಗಾಗಿ ಹೋರಾಟ ನಡೆಸಿದ ಮಹನೀಯರು. ಅದೇ ದಾರಿಯಲ್ಲಿ ಸಂಘ



ಟನೆಗಳು ಹಿಂದುಳಿದ ದಲಿತ ಮತ್ತು ಬಡ ಮಕ್ಕಳಿಗೆ ಸಹಾಯ ಮಾಡುವ ಉದ್ದೇಶದಿಂದ ಕಾರ್ಯನಿರ್ವಹಿಸಬೇಕೆಂದರು.

ಒಗ್ಗಟ್ಟಿನಲ್ಲಿ ಬಲವಿದೆ. ಸಮುದಾಯದ ಶಕ್ತಿಯನ್ನು ಸಂಘಟಿತವಾಗಿ ಪ್ರದರ್ಶಿಸಿದಾಗ ಮಾತ್ರ ಸಾಮಾಜಿಕ ಮತ್ತು ಶೈಕ್ಷಣಿಕ ಪ್ರಗತಿ ಸಾಧ್ಯ. ಮನಸ್ಸಿನಿಂದ ತತ್ವ ಹಾಗು ನ್ಯಾಯಬದ್ಧ ಕೆಲಸ ಮಾಡಿದರೆ ಸಮುದಾಯದ ಭವಿಷ್ಯ ಉಜ್ವಲವಾಗುತ್ತದೆ. ಯುವ ಜನರಲ್ಲಿ ವಿದ್ಯಾಭ್ಯಾಸದ ಚೈತನ್ಯ ಹೆಚ್ಚಿಸುವ ಕೆಲಸ ಸಂಘದ ಹೊಣೆ ಎಂದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರ ನೇತೃತ್ವದಲ್ಲೇ ಜಿಲ್ಲೆಯಲ್ಲಿ 2028ರ ಚುನಾವಣೆ ನಡೆಸಲಾಗುವುದು. ಅವರ ನಾಯಕತ್ವ ಸದೃಢವಾಗಿದೆ. ಪಕ್ಷದ ಪರವಾಗಿ ಧೈರ್ಯವಾಗಿ ಮಾತನಾಡುವ ಕಲೆ ಅವರಿಗೆ ಕರಗತವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ಮಾದಿಗ ಸಮುದಾಯದಿಂದ ಹೆಚ್ಚು ಬಾರಿ ಸಂಸದರಾಗಿರುವ ನಾಯಕ ಮುನಿಯಪ್ಪ ಅವರು ಒಳ ಮೀಸಲಾತಿ, ಸಮಾನತೆ ಮತ್ತು ನ್ಯಾಯಕ್ಕಾಗಿ ಹೋರಾಡಿದ್ದಾರೆ. ದಲಿತರ ಹಕ್ಕು ಪಡೆಯಲು ಸಾಕಷ್ಟು ಶ್ರಮಿಸಿದ್ದಾರೆ. ಸಮುದಾಯದ ಆರ್ಥಿಕ ಪ್ರಗತಿಗೆ ಸಂಘಟನೆಗಳು ಗಮನ ಹರಿಸಬೇಕು. ಜಿಲ್ಲಾ ಪಂಚಾಯಿತಿ ಹಾಗು ತಾಲೂಕು ಪಂಚಾಯಿತಿ ಮಟ್ಟದಲ್ಲಿ ದಲಿತರಿಗೆ ಹೆಚ್ಚಿನ ಪ್ರತಿನಿಧಿತ್ವ ಸಿಗುವಂತೆ ಪ್ರಯತ್ನಿಸಲಾಗಿದೆ ಎಂದರು.

ಮಾದಿಗ ಸಮುದಾಯ ಜಿಲ್ಲಾಧ್ಯಕ್ಷ ವಿಜಯಕುಮಾರ್ ದಂಡೋರ ಅವರು ಮಾತನಾಡಿ, ಕಳೆದ ಹಲವು ದಶಕಗಳಿಂದ ಸಮುದಾಯದ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸಿದ ನಾಯಕತ್ವವನ್ನು ಬೆಂಬಲಿಸಬೇಕು. ಸಂಘದ ಸದಸ್ಯತ್ವ ಪಡೆದು ಯುವಕರನ್ನು ಬೆಳೆಸುವ ಕಾರ್ಯದಲ್ಲಿ ಎಲ್ಲರೂ ಭಾಗಿಯಾಗಬೇಕು. ವಿದ್ಯಾರ್ಥಿಗಳು, ನೌಕರರು ಹಾಗು ಸಾರ್ವಜನಿಕರು ಸಂಘಟನೆಗೆ ಬೆಂಬಲ ನೀಡಿದರೆ ಚಳವಳಿ ಜೀವಂತವಾಗಿರುತ್ತದೆಂದು ಹೇಳಿದರು.

ಮಾದಿಗ ದಂಡೋರ ಸಮಿತಿ ರಾಜ್ಯಾಧ್ಯಕ್ಷ ಮಂಜುನಾಥ, ಮಾಜಿ ಸಂಸದ ಚಂದ್ರಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯ ಧರ್ಮಸೇನಾ, ಶಿವಪ್ಪ, ಎಂ.ಆರ್.ವೆಂಕಟೇಶ್, ಸಿ.ಆರ್. ಮಂಜುನಾಥ, ದೇವರಾಜು, ಮುನಿಸ್ವಾಮಿ, ಸತೀಶ್, ಚಂದ್ರಶೇಖರ್, ರವೀಶ್ ಬಸ್ಸಾಪುರ, ಶಿವಮೂರ್ತಿ ಮತ್ತಿತರರಿದ್ದರು.




# ಅದೃಶ್ಯ-ಅಗೋಚರ: ಸಂಪರ್ಕ ಮಾಧ್ಯಮ, ವಾಸನಾ ದ್ರವ್ಯಗಳು

» ಮಾನವ ಮತ್ತೊಬ್ಬ ಮಾನವನೊಂದಿಗೆ ಮಾತಿನ ಮೂಲಕ, ಪಶು-ಪಕ್ಷಿಗಳು ತಮಗೆ ಅರ್ಥವಾಗುವಂಥ ಶಬ್ದಗಳ ಮೂಲಕ ಸಂಪರ್ಕ ನಡೆಸುತ್ತವೆ. ಇವೆರಡರ ಲಭ್ಯವಿಲ್ಲದ ಕೆಲವು ಜೀವಿಗಳು ವಾಸನಾಯುಕ್ತ ವಾದ ಹಲವು ಸಾವಯವ ಸಂಕೀರ್ಣ ರಾಸಾಯನಿಕ ವಸ್ತುಗಳನ್ನು ಉತ್ಪಾದಿಸುವುದರ ಮೂಲಕ ಸಂಪರ್ಕ ನಡೆಸುತ್ತವೆ.

ಹಿಂದಿರುಗಿ ನೋಡಿದಾಗ ನಮಗೆ ತಿಳಿಯದಂತೆಯೇ ನಾವು ವಾಸನಾದ್ರವ್ಯಗಳನ್ನು ಉತ್ಪಾದಿಸಿ, ನಮ್ಮ ಕಣ್ಣ ಮುಂದೆಯೇ ಅವುಗಳ ಪರಿಣಾಮ ಕಾಣುತ್ತಿದ್ದರೂ, ನಾವು ಅವುಗಳನ್ನು ತಿಳಿಯದಿರಲು ಸಾಧ್ಯವಿದೆ. ಸಾಮಾನ್ಯವಾಗಿ ಒಬ್ಬರು ಆಕಳಿಸಿದಾಗ ಮತ್ತೊಬ್ಬರು ಆಕಳಿಸುವುದನ್ನು ಗಮನಿಸಿರಬಹುದು.

ನಾಯಿ ತನ್ನ ಯಜಮಾನನನ್ನು ಸುಲಭವಾಗಿ ಕಂಡುಹಿಡಿಯುತ್ತದೆ, ಅಂತೆಯೇ ಕಳ್ಳರನ್ನು ಹಿಡಿಯುತ್ತದೆ. ಸೊಳ್ಳೆಗಳು ನಾವೆಲ್ಲೇ ಇದ್ದರೂ ನಮ್ಮನ್ನು ಹುಡುಕಿಕೊಂಡು ಬಂದು ರಕ್ತ ಹೀರುತ್ತವೆ. ಇರುವೆಗಳು ಒಂದರ ಹಿಂದೆ ಒಂದಾಗಿ ಶಿಸ್ತಿನ ಸಿಪಾಯಿಗಳಂತೆ ಹೋಗುತ್ತವೆ. ಇವನ್ನೆಲ್ಲಾ ನೋಡಿದಾಗ ತುಸು ಆಶ್ಚರ್ಯವಾಗಬಹುದು.

ಮಾನವ ಮತ್ತೊಬ್ಬ ಮಾನವನೊಂದಿಗೆ ಮಾತಿನ ಮೂಲಕ, ಪಶು-ಪಕ್ಷಿಗಳು ತಮಗೆ ಅರ್ಥವಾಗುವಂಥ ಶಬ್ದಗಳ ಮೂಲಕ ಸಂಪರ್ಕ ನಡೆಸುತ್ತವೆ. ಇವೆರಡರ ಲಭ್ಯವಿಲ್ಲದ ಕೆಲವು ಜೀವಿಗಳು ವಾಸನಾಯುಕ್ತವಾದ ಹಲವು ಸಾವಯವ ಸಂಕೀರ್ಣ ರಾಸಾಯನಿಕ ವಸ್ತುಗಳನ್ನು ಉತ್ಪಾದಿಸುವುದರ ಮೂಲಕ ಸಂಪರ್ಕ ನಡೆಸುತ್ತವೆ.



ಒಂದು ಪ್ರಾಣಿ ಉತ್ಪಾದಿಸಿದ ವಾಸನೆಯನ್ನು ಮತ್ತೊಂದು ಪ್ರಾಣಿ ಘ್ರಾಣಿಸಿ ಅದರ ಅರ್ಥವನ್ನು ತಿಳಿಯಬಲ್ಲದು. ಈ ರಾಸಾಯನಿಕ ವಸ್ತುಗಳು ದೇಹದಲ್ಲಿ ಉತ್ಪಾದಿತವಾಗುವ ಕಾರಣ ದೈಹಿಕ ರಾಸಾಯನಿಕಗಳು ಎಂದೂ, ಇವುಗಳಿಂದ ನಡೆಯುವ ಸಂಪರ್ಕವನ್ನು ದೇಹೋ-ರಾಸಾಯನಿಕ ಸಂಪರ್ಕ ಎಂದೂ ಕರೆಯ ಲಾಗುತ್ತದೆ. ಈ ರಾಸಾಯನಿಕ ವಸ್ತುಗಳನ್ನು ವಾಸನಾದ್ರವ್ಯಗಳೆಂದು ಕರೆಯಲಾಗುತ್ತದೆ. ವಾಸನಾದ್ರವ್ಯಗಳ ಬಗ್ಗೆ ಕೀಟಗಳಲ್ಲಿ ಹೆಚ್ಚಿನ ಅಧ್ಯಯನವನ್ನು ಮಾಡಲಾಗಿದೆ. ಈ ದ್ರವ್ಯಗಳ ಅಸ್ತಿತ್ವವನ್ನು ಇತರ ಪ್ರಾಣಿಗಳಲ್ಲಿ ಕಂಡುಹಿಡಿದಿದ್ದು, ಮಾನವರಲ್ಲಿಯೂ ನಿರೀಕ್ಷಿಸಲಾಗಿದೆ.

ವಾಸನಾದ್ರವ್ಯಗಳು ನಡೆಸುವ ಕಾರ್ಯದ ಆಧಾರದ ಮೇಲೆ ಅವುಗಳನ್ನು ಲೈಂಗಿಕ ವಾಸನಾದ್ರವ್ಯ, ಎಚ್ಚರಿಕಾ ವಾಸನಾದ್ರವ್ಯ, ಸಮಷ್ಟಿ ವಾಸನಾದ್ರವ್ಯ, ಮಾರ್ಗಸೂಚಕ ವಾಸನಾದ್ರವ್ಯ, ಕ್ಷೇತ್ರಸೂಚಕ ವಾಸನಾದ್ರವ್ಯ, ವಿಕರ್ಷಕ ವಾಸನಾದ್ರವ್ಯ ಎಂಬುದಾಗಿ ವಿಂಗಡಿಸಲಾಗಿದೆ.

**ಮಾರ್ಗಸೂಚಕಗಳು:** ಇರುವೆಗಳು ಒಂದರ ಹಿಂದೆ ಒಂದಾಗಿ ಶಿಸ್ತಿನ ಸಿಪಾಯಿಗಳಂತೆ ನಡೆಯುತ್ತಿರುವುದನ್ನು ನೀವು ಗಮನಿಸಿರಬಹುದು. ಅವುಗಳು ನಡೆಯುತ್ತಿರುವ ಮಾರ್ಗವನ್ನು ನಮ್ಮ ಬೆರಳಿನಿಂದ ಅಡ್ಡಡ್ಡವಾಗಿ ಒರೆಸಿ ಬಿಟ್ಟಾಗ ಅವು ದಾರಿ ತಿಳಿಯದೆ ಅತ್ತಿತ್ತ ಚದುರುತ್ತವೆ, ಕಾರಣ ಮಾರ್ಗಸೂಚಕಗಳು ಸಿಗದಿರುವುದು.

ಇರುವೆಯ ಹಿಂಭಾಗದಲ್ಲಿ ಕಿಬ್ಬೊಟ್ಟೆಯ ತಳದಲ್ಲಿ ವಾಸನಾ ದ್ರವ್ಯೋತ್ಪಾದಕ ಗ್ರಂಥಿಗಳಿರುತ್ತವೆ. ಉತ್ಪಾದಿತವಾದ ದ್ರವ್ಯವು ಇರುವೆಯು ನೆಲದ ಮೇಲೆ ನಡೆಯುವಾಗ ಒಂದು ಮುಳ್ಳಿನ ಮುಖಾಂತರ ಹರಿದುಕೊಂಡು ಹೋಗುತ್ತದೆ- ಲೇಖನಿಯಿಂದ ಶಾಯಿ ಹರಿಯುವ ಹಾಗೆ. ಈ ಮಾರ್ಗ ಸೂಚಕವು ಉತ್ಪಾದಿಸಿದ ವಾಸನೆಯನ್ನು ಗುರುತುಹಿಡಿದುಕೊಂಡು ಮತ್ತೊಂದು ಇರುವೆಯು ಮೊದಲಿನ ಇರುವೆ ಹೋಗಿರುವ ಸ್ಥಳವನ್ನು ತಲುಪಬಲ್ಲದು. ಈ ಇರುವೆ ಹೋಗುವಾಗಲೂ ಮಾರ್ಗ ಸೂಚಕಗಳನ್ನು ಹರಿಸಿಕೊಂಡೇ ಹೋಗುತ್ತದೆ.

ಇದನ್ನು ಸರಿಸಿ ಮತ್ತೊಂದು ಇರುವೆ ಬರುತ್ತದೆ. ಈ ಕ್ರಿಯೆ ಹೀಗೆ ಅವ್ಯಾಹತವಾಗಿ ನಡೆಯುವ ಕಾರಣ ಇರುವೆಗಳು ಒಂದರ ಹಿಂದೆ ಒಂದು ನಡೆಯುವಂತೆ ಕಾಣುತ್ತದೆ.

ಒಂದು ಜೇನುನೊಣವು ಹೂಗಳಿರುವ ಸ್ಥಳವನ್ನು ಕಂಡುಹಿಡಿದುಕೊಂಡು, ಗೂಡಿಗೆ ಬರುವಾಗ ಮಾರ್ಗ ಸೂಚಕಗಳನ್ನು ಸಿಂಪಡಿಸಿಕೊಂಡು ಬಂದು, ಹುಟ್ಟಿನ ಸುತ್ತಲೂ ಒಂದು ರೀತಿಯ ನಾಟ್ಯವನ್ನಾಡಲಾರಂಭಿಸುತ್ತದೆ. ಆಗ ಹುಟ್ಟಿನಲ್ಲಿರುವ ಇತರ ನೊಣಗಳು ಈ ನೊಣವನ್ನು ಹಿಂಬಾಲಿಸುತ್ತವೆ. ಸಿಂಪಡಿಸಿಕೊಂಡು ಬಂದ ಮಾರ್ಗಸೂಚಕಗಳು ಹೂಗಳಿರುವ ಸ್ಥಳವನ್ನು ಸೇರಲು ಅದು ಸಹಾಯಕವಾಗುತ್ತವೆ.

**ಎಚ್ಚರಿಕಾ ವಾಸನಾದ್ರವ್ಯಗಳು:** ಅಪಾಯದ ಸನ್ನಿವೇಶಗಳಲ್ಲಿ ಕೀಟಗಳು ಇದನ್ನು ಉತ್ಪಾದಿಸುತ್ತವೆ. ಗೂಡಿನಲ್ಲಿರುವ ಒಂದು ಇರುವೆಯನ್ನು ಕೆದಕಿದರೆ ಸಾಕು, ಅಲ್ಲಿರುವ ಇರುವೆಗಳೆಲ್ಲಾ ಗಲಿಬಿಲಿಗೊಳ್ಳುತ್ತವೆ. ಇದಕ್ಕೆ ಕಾರಣ ಕೆಣಕಲ್ಪಟ್ಟ ಇರುವೆಯ ಎಚ್ಚರಿಕಾ ವಾಸನಾದ್ರವ್ಯ. ಇದನ್ನು ಘ್ರಾಣಿಸಿದ ಇತರ ಇರುವೆಗಳು ತಕ್ಷಣ ಅಪಾಯದಿಂದ ತಪ್ಪಿಸಿ ಕೊಳ್ಳಲು ಪ್ರಯತ್ನಿಸುತ್ತವೆ.

ಜೇನುನೊಣ ಕೆರಳಿ ಕಚ್ಚಿದಾಗ, ಮುಳ್ಳಿನೊಡನಿರುವ ಅನೇಕ ಏಕಕೋಶ ಗ್ರಂಥಿಗಳು ಐಸೋ ಅಮೈಲ್ ಅಸಿಟೇಲ್ ಎಂಬ ವಾಸನಾದ್ರವ್ಯವನ್ನು ಉತ್ಪಾದಿಸುತ್ತದೆ. ಇದನ್ನು ಘ್ರಾಣಿಸಿದ ಇತರ ನೊಣಗಳು, ಅದೇ ವ್ಯಕ್ತಿಯನ್ನು, ಅದೇ ಸ್ಥಳದಲ್ಲಿ ಮುತ್ತಿ ಕಚ್ಚಲಾರಂಭಿಸುತ್ತವೆ.

ಸಮಷ್ಟಿ ವಾಸನಾದ್ರವ್ಯಗಳು: ಲೈಕಸ್ ಲೋರಿಪೆಸ್ ಎಂಬ ಜೀರುಂಡೆಯು ಇದನ್ನು ಉತ್ಪಾದಿಸುತ್ತದೆ. ಇದು ಬಿಡುಗಡೆಯಾದ ಕೂಡಲೆ, ಎಲ್ಲೆಲ್ಲಿರುವ ಜೀರುಂಡೆಗಳೆಲ್ಲ ಒಂದೆಡೆ ಕಲೆಯಲಾರಂಭಿಸುತ್ತವೆ. ಸೋಲೆನೋಪ್ಸಿಸ್ ಪೆಸ್ಸಿಮ ಎಂಬ ಜಾತಿಯ ಕೆಲಸಗಾರ ಇರುವೆ ಬಹುಶಃ ಇಂಗಾಲದ ಡೈ-ಆಕ್ಸೈಡನ್ನು ಉತ್ಪಾದಿಸಿ, ಇರುವೆಗಳನ್ನೆಲ್ಲ ಒಂದೆಡೆ ಕಲೆಯುವಂತೆ ಮಾಡುತ್ತದೆ.

**ವಿಕರ್ಷಿಕ ವಾಸನಾದ್ರವ್ಯಗಳು:** ಒಂದೇ ಜಾತಿಯ ಕೀಟಗಳ ಸಂಖ್ಯೆ, ಒಂದೇ ಕಡೆ ಹೆಚ್ಚಾದಾಗ ಇದು ಉತ್ಪಾದಿಸಲ್ಪಡುತ್ತದೆ. ಆಗ ಕೀಟಗಳು ಆ ಸ್ಥಳದಿಂದ ಬೇರೆ ಬೇರೆ ಕಡೆಗೆ ಪ್ರಯಾಣ ಮಾಡುತ್ತವೆ. ಟ್ರೈಟೋಲಿಯಂ ಕ್ಯಾಸ್ಟೆನಂ ಮತ್ತು ಟ್ರೈಟೋಲಿಯಂ ಕಾರ್-ಸಂ ಇದಕ್ಕೆ ಉತ್ತಮ ಉದಾಹರಣೆಗಳು.

ಇರುವೆಯು ಸತ್ತು ಕೊಳೆಯಲಾರಂಭಿಸಿದಾಗ ಒಂದು ರೀತಿಯ ವಾಸನಾದ್ರವ್ಯ ಉತ್ಪಾದನೆಯಾಗುತ್ತದೆ. ಆಗ ಕೆಲಸಗಾರ ಇರುವೆಗಳು ಸತ್ತ ಇರುವೆಯ ಹೆಣವನ್ನು ಗೂಡಿನಿಂದ ಹೊರಗಿರುವ ಸ್ಮಶಾನಕ್ಕೆ ಎಳೆದುಕೊಂಡು ಬರುತ್ತವೆ. ಈ ಸತ್ತ ಇರುವೆಯಿಂದ ಹೊರತೆಗೆದ ವಾಸನಾ ದ್ರವ್ಯವನ್ನು ಬದುಕಿರುವ ಇರುವೆಯ ದೇಹಕ್ಕೆ ಬಳಿದರೆ, ಕೆಲಸಗಾರ ಇರುವೆಗಳು ಅದನ್ನು ಸತ್ತಿದೆಯೆಂದೇ ಭಾವಿಸಿ, ಸ್ಮಶಾನಕ್ಕೆ ಎಳೆದು ತರುತ್ತವೆ.

ಒಂದು ವೇಳೆ ಆ ಇರುವೆ ಮತ್ತೆ ಗೂಡಿನೊಳಗೆ ಪ್ರವೇಶಿಸಿತೆಂದರೆ, ಮತ್ತೆ ಅದನ್ನು ಸ್ಮಶಾನ ಕ್ಕೆಳೆದು ಕೊಂಡು ಬಂದು ತಮ್ಮ ಕರ್ತವ್ಯ ನಿಷ್ಠೆಯನ್ನು ತೋರಿಸುತ್ತವೆ. ಇರುವೆಯ ಮೈ ಮೇಲೆ ಆ ರಾಸಾಯನಿಕ ದ್ರವ್ಯ ಇರುವವರೆಗೂ ಈ ಕ್ರಿಯೆ ನಡೆಯುತ್ತಲೇ ಇರುತ್ತದೆ. ಈ ದ್ರವ್ಯವನ್ನು ಒಂದು ಕಲ್ಲಿನ ಚೂರಿಗೆ ಬಳಿದರೂ, ಮೇಲ್ಕಂಡ ಪರಿಣಾಮವನ್ನೇ ಕಾಣಬಹುದು.

**ಲೈಂಗಿಕ ವಾಸನಾದ್ರವ್ಯಗಳು:** ಗಂಡು ಕೀಟ, ಹೆಣ್ಣು ಕೀಟವಿರುವ ಸ್ಥಳವನ್ನು ಗುರುತು ಹಿಡಿಯುವುದು ಲೈಂಗಿಕ ವಾಸನಾದ್ರವ್ಯಗಳ ಸಹಾಯದಿಂದ. ಇವು ಲೈಂಗಿಕಾರ್ಷಣೆಯನ್ನು ಮಾಡಬಲ್ಲವು. ಅಂತೆಯೇ ಕ್ರಿಯೆಗಳನ್ನೂ ಉತ್ತೇಜಿಸಬಲ್ಲವು.

ವಿಜ್ಞಾನಿಗಳು ರೇಷ್ಮೆ ಪತಂಗ ಮತ್ತು ಜಿಪ್ಸಿ ಪತಂಗಗಳ ಮೇಲೆ ಪ್ರಯೋಗ ನಡೆಸಿ, ಕ್ರಮವಾಗಿ ಬಾಂಬಿಕೋಲ್ ಮತ್ತು ಜಿಪ್ಲೂರ್ ಎಂಬ ಲೈಂಗಿಕ ವಾಸನಾ ದ್ರವ್ಯಗಳನ್ನು ಕಂಡು ಹಿಡಿದಿದ್ದಾರೆ. ಸುಮಾರು ಐದು ಲಕ್ಷ ಜಿಪ್ಸಿ ಪತಂಗಗಳಿಂದ ಕೇವಲ 20 ಮಿಲಿ ಗ್ರಾಂ.ನಷ್ಟು ಜಿಪ್ಲೂರನ್ನು ಪಡೆಯಲಾಯಿತು.

ಅಂದರೆ ಪ್ರತಿಯೊಂದು ಪತಂಗದಲ್ಲೂ 0.01 ಮೈಕ್ರೋಗ್ರಾಂ.ನಷ್ಟಿದೆಯೆಂದಾಯಿತು. ಇಷ್ಟು ಅಲ್ಪ ಪ್ರಮಾಣದ ವಾಸನಾದ್ರವ್ಯ ಸುಮಾರು ಎರಡು ಮೈಲಿಗೂ ಮಿಕ್ಕಿ ದೂರದಲ್ಲಿರುವ ಒಂದು ಬಿಲಿಯನ್‌ನಷ್ಟು ಗಂಡು ಪತಂಗಗಳನ್ನು ಆಕರ್ಷಿಸಬಲ್ಲದು. ಈ ವಾಸನೆ ಎಷ್ಟು ಪ್ರಬಲವಾಗಿರುತ್ತದೆಯೆಂದರೆ, ಈ ವಾಸನಾದ್ರವ್ಯವನ್ನು ಯಾವುದಾದರೂ ಮರ ಅಥವಾ ಪ್ಲಾಸ್ಟಿಕ್ಕಿನ ಪತಂಗಗಳಿಗೆ ಸವರಿದರೆ, ಗಂಡು ಅದನ್ನೇ ನಿಜವಾದ ಹೆಣ್ಣು ಪತಂಗವೆಂದು ಗಣಿಸಿ ಅದರೊಡನೆ ಸಂಭೋಗ ಮಾಡಲೆತ್ನಿಸುತ್ತದೆ.


ಇದನ್ನು ಕಂಡ ವಿಜ್ಞಾನಿಗಳು ದೊಡ್ಡ ದೊಡ್ಡ ಬಲೆಗಳಲ್ಲಿ ಈ ಲೈಂಗಿಕ ವಾಸನಾದ್ರವ್ಯಗಳನ್ನಿಟ್ಟು ಗಂಡುಗಳು ತಾವಾಗಿಯೇ ಅದರಲ್ಲಿ ಬಂದು ಬೀಳುವಂತೆ ಮಾಡುತ್ತಾರೆ. ಇದರಿಂದ ಬೆಳೆಗಳನ್ನು ನಾಶ ಮಾಡುವ ಈ ಕೀಟಗಳನ್ನು ನಿಯಂತ್ರಿಸಬಹುದಾಗಿದೆಯಲ್ಲದೆ, ಅವುಗಳ ವಂಶಾಭಿವೃದ್ಧಿ ಆಗದಂತೆ ತಡೆಗಟ್ಟಬಹುದಾಗಿದೆ.

ಜೇನು ನೊಣಗಳಲ್ಲಿ ರಾಣಿಜೇನು, ರಾಣಿ ದ್ರವ್ಯ ಎಂಬ ವಾಸನಾ ದ್ರವ್ಯವನ್ನು ಉತ್ಪಾದಿಸುತ್ತದೆ. ಇದನ್ನು ಸೇವಿಸಿದಾಗ, ಕೆಲಸಗಾರ ನೊಣಗಳ ಲೈಂಗಿಕಾಂಗಗಳು ಬೆಳೆಯುವುದಿಲ್ಲ. ರಾಣಿ ನೊಣವು ಗಂಡಿನೊಡನೆ ಮಿಲನವಾಗಲು ಹಾರಿದಾಗ ಇದು ಗಂಡು ನೊಣವನ್ನು ಆಕರ್ಷಿಸುತ್ತದೆ.

ಡನೇಯ್ಡ್ ಗಂಡು ಚಿಟ್ಟೆ ಕುಂಚದಂಥ ಸ್ಪರ್ಶಾಂಗವನ್ನು ಹೊಂದಿರುತ್ತದೆ. ಹಾರುವಾಗ ಹೆಣ್ಣಿನ ಸ್ಪರ್ಶಾಂಗವನ್ನು ಕುಂಚದಿಂದ ಹೊಡೆಯುತ್ತದೆ. ಈ ಹೊಡೆಯುವ ಕ್ರಿಯೆ, ಹೆಣ್ಣು ಸಂಭೋಗಕ್ಕೆ ಅಣಿಯಾಗುವವರೆಗೂ ನಡೆಯುತ್ತಲೇ ಇರುತ್ತದೆ.

ಕೀಟಗಳು ವಾಸನಾದ್ರವ್ಯೋತ್ಪಾದಕ ಗ್ರಂಥಿಗಳನ್ನು ದವಡೆಯ ಬಳಿ, ಗುದದ ಬಳಿ ಅಥವ ಮುಳ್ಳಿನಲ್ಲಿ ಹೊಂದಿದ್ದು, ಅಲ್ಲಿಂದಲೇ ವಾತಾವರಣಕ್ಕೆ ಬಿಡುಗಡೆ ಮಾಡುತ್ತವೆ. ಗಾಳಿಯಲ್ಲಿ ಆವಿಯಾಗಿ ತೇಲಿಹೋದಾಗ ಬೇರೆ ಕೀಟಗಳು, ಸ್ಪರ್ಶಾಂಗಗಳ ಮುಖಾಂತರ ಅದನ್ನು ಘ್ರಾಣಿಸಿ ಅದು ಸಾರುವ ಸಂದೇಶವನ್ನು ತಿಳಿಯುತ್ತವೆ.

ಗ ' ಂ ಡಿ ನ '



ಸ್ಪರ್ಶಾಂಗವು ಹೆಣ್ಣಿನದಕ್ಕಿಂತ ತುಸು ಭಿನ್ನವಾಗಿರುವ ಕಾರಣ ಇದು ವಾಸನೆಯನ್ನು ತತ್‌ಕ್ಷಣ ಗ್ರಹಿಸಬಲ್ಲದು. ಕೆಲವು ವೇಳೆ ಈ ವ್ಯಾಪಾರವು ರಸನೇಂದ್ರಿಯದ ಮೂಲಕವೂ ನಡೆಯಬಹುದು. ವಾಸನಾದ್ರವ್ಯಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು.

ಒಂದು ಜಾತಿಯ ಜೀವಿಯು ಉತ್ಪಾದಿಸಿದ ವಾಸನಾದ್ರವ್ಯವನ್ನು ಅದೇ ಜಾತಿಯ ಮತ್ತೊಂದು ಜೀವಿಯು ತಿಳಿಯಲು ಸಾಧ್ಯವಿರುವಂಥವು ಮತ್ತು ಒಂದು ಜಾತಿ ಉತ್ಪಾದಿಸಿದುದನ್ನು ಇತರ ಜೀವಿಗಳೂ ತಿಳಿಯಬಲ್ಲಂಥವು.

ಉತ್ಪಾದನೆಯಾದ ವಾಸನಾದ್ರವ್ಯವು ಬಿಡುಗಡೆಯಾದ ಕೂಡಲೇ ಪ್ರಭಾವ ಬೀರಲಾರಂಭಿಸಿದರೆ ಅದು ನೇರವಾಗಿ ಕೇಂದ್ರ ನರಮಂಡಲದ ಮೇಲೆ ಪ್ರಭಾವ ಬೀರುವುದರಿಂದ ಪರಿಣಾಮ ತತ್‌ಕ್ಷಣ ಉಂಟಾಗುತ್ತದೆ. ಉದಾಹರಣೆಗೆ, ಎಚ್ಚರಿಕಾ ವಾಸನಾದ್ರವ್ಯಗಳು. ಅಥವಾ ಬಿಡುಗಡೆಯಾಗಿ ಸ್ವಲ್ಪಕಾಲದ ನಂತರ ಪ್ರಭಾವ ಬೀರಲಾರಂಭಿಸಿದರೆ ಅದು ನಿರ್ನಾಳ ಗ್ರಂಥಿಗಳು ಮತ್ತು ಜನನಾಂಗಳ ಮೇಲೆ ಪ್ರಭಾವ ಬೀರುತ್ತದೆ. ಇದಕ್ಕೆ ರಾಣಿದ್ರವ್ಯ ಉತ್ತಮ ಉದಾಹರಣೆ. ಕೆಲವು ವಾಸನಾದ್ರವ್ಯಗಳು ಎರಡು ಕಾರ್ಯಗಳನ್ನೂ ಒಟ್ಟಾಗಿ ಮಾಡಬಲ್ಲವು. ಇತರೆ ಪ್ರಾಣಿಗಳಲ್ಲಿ, ಸೀಗಡಿ, ಮೀನು, ಸಲಾಮ್ಯಾಂಡರ್, ಕಪ್ಪೆ, ಹಾವು ಮುಂತಾದ ಪ್ರಾಣಿಗಳೂ ವಾಸನಾದ್ರವ್ಯಗಳನ್ನು ಉತ್ಪಾದಿಸುತ್ತವೆ ಎನ್ನಲಾಗಿದೆ.

ಕೆಲವು ಪ್ರಾಣಿಗಳು ಅತ್ಯಂತ ವಿಕಾಸ ಹೊಂದಿದ್ದರೂ, ಲೈಂಗಿಕಾಕರ್ಷಣೆಗೆ ವಾಸನಾದ್ರವ್ಯಗಳ ಮೊರೆ ಹೋಗುತ್ತವೆ. ಉದಾಹರಣೆಗೆ ಕಸ್ತೂರಿಮೃಗ ವಾಸನಾಯುಕ್ತ ಕಸ್ತೂರಿಯನ್ನು ಪಡೆದಿರುತ್ತದೆ. ಇದು ಲೈಂಗಿಕಾಕರ್ಷಣೆಯನ್ನು ಅವುಗಳಲ್ಲಿ ಉಂಟುಮಾಡುತ್ತದೆ.

ಅಂತೆಯೇ ಪುನಗಿನ ಬೆಕ್ಕು ಸಿವೆಟೋನ್ ಎಂಬ ವಾಸನಾ ದ್ರವ್ಯವನ್ನು ಉತ್ಪಾದಿಸುತ್ತದೆ. ಇದು ಲೈಂಗಿಕ ಮತ್ತು ಎಚ್ಚರಿಕಾ ವಾಸನಾದ್ರವ್ಯವಾಗಿ ಕಾರ್ಯನಿರ್ವಹಿಸುತ್ತದೆ. ಮೊಸಳೆಗಳೂ ಮಿಲನದ ಕಾಲದಲ್ಲಿ ವಾಸನಾದ್ರವ್ಯಗಳನ್ನು ಉತ್ಪಾದಿಸುತ್ತವೆನ್ನಲಾಗಿದೆ.

ಅಮೆರಿಕದಲ್ಲಿರುವ ಅಲೆಗೇಟರುಗಳು (ಮೊಸಳೆ ಜಾತಿಗೆ ಸೇರಿದ ಪ್ರಾಣಿ) ಕಾರಂಜಿಯ ರೂಪದಲ್ಲಿ ವಾಸ ನಾದ್ರವ್ಯವನ್ನು ಚಿಮ್ಮುತ್ತವೆ. ಈ ವಾಸನೆ ಮೈಲಿಗಟ್ಟಲೆ ಹರಡಿರುತ್ತದೆ. ಇವು ತಮ್ಮ ವಾಸ ಸ್ಥಾನವನ್ನು ಸೂಚಿಸಲು ಕ್ಷೇತ್ರ ಸೂಚಕಗಳನ್ನು ಉತ್ಪಾದಿಸುತ್ತವೆ.

ಇಲಿಯ ಮೂತ್ರದಲ್ಲಿ ಪ್ರಾಥಮಿಕ ವಾಸನಾದ್ರವ್ಯಗಳಿರುವುದನ್ನು ಕಂಡು ಹಿಡಿಯಲಾಗಿದೆ. ರಜಸ್ವಲೆಯಾದ ಹೆಣ್ಣುಕಪಿ, ಆಡುಗಳ ಸುತ್ತಲೂ ಇರುವ ಗಂಡು ಕಪಿ, ಆಡುಗಳು ಹೆಚ್ಚಾಗಿ ಲೈಂಗಿಕ ಪ್ರಚೋದನೆಗೊಳಗಾಗುವುದನ್ನು ಗಮನಿಸಲಾಗಿದೆ. ಇದಕ್ಕೆ ಕಾರಣ ಹೆಣ್ಣಿನಿಂದ ಉತ್ಪಾದನೆಯಾಗುತ್ತಿರಬಹುದಾದ ಲೈಂಗಿಕ ವಾಸನಾದ್ರವ್ಯವೆನ್ನಲಾಗಿದೆ.

**ಮಾನವರಲ್ಲಿ:** ನಾಯಿಗಳು ಒಬ್ಬ ಮನುಷ್ಯನು ಉಪಯೋಗಿಸಿದ ಕರವಸ್ತ್ರ, ಕೈಕೋಲು ಮುಂತಾದವುಗಳ ವಾಸನೆಯನ್ನು ನೋಡಿ, ಅವರನ್ನು ಹಿಡಿಯಬಲ್ಲದು (ಆದರೆ ಅವಳಿ ಮಕ್ಕಳ ವ್ಯತ್ಯಾಸವನ್ನು ಗುರುತು ಹಿಡಿಯಲಾರವು). ಅಂದರೆ, ನಾಯಿಗಳು ಹಿಡಿಯಬಲ್ಲಂಥ ಯಾವುದೋ ಒಂದು ವಾಸನಾದ್ರವ್ಯವನ್ನು ಮಾನವ ಉತ್ಪಾದಿಸುತ್ತಿದ್ದಾನೆ ಎಂದಾಯಿತಲ್ಲವೆ? ಈ ವಾಸನೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾವಣೆಯಾಗುತ್ತಿರುತ್ತದೆ.

ಇದನ್ನು ಮನುಷ್ಯ ಗುರುತಿಸಲಾರ. ಇದು ಅವನು ಸೇವಿಸುವ ಆಹಾರ, ಉಡುವ ಬಟ್ಟೆ, ದೈನಂದಿನ ಚಟುವಟಿಕೆಗಳನ್ನು ಅನುಸರಿಸಿರುತ್ತದೆ. ನಾವು ಎಲ್ಲೇ ಇದ್ದರೂ ನಮ್ಮನ್ನು ಹುಡುಕಿಕೊಂಡು ಬಂದು ಕಚ್ಚುವ ಸೊಳ್ಳೆಗಳು, ನಮ್ಮ ಬೆವರಿನಲ್ಲಿ ಉತ್ಪಾದನೆಯಾಗುವ ಹಲವು ರಾಸಾಯನಿಕ ವಸ್ತುಗಳ ವಾಸನೆಯನ್ನು ಗುರುತು ಹಿಡಿದುಕೊಂಡು ಬರುತ್ತವೆ.

ಹಳದೀ ಜ್ವರಕಾರಕ ಸೊಳ್ಳೆಗಳು ಬೆವರಿನಲ್ಲಿರುವ ಎಲ್-ಲ್ಯಾಕ್ಟಿಕ್ ಆಮ್ಲವನ್ನು ಗ್ರಹಿಸಿ ಕೊಂಡು ಬರುತ್ತವೆ. ಜತೆಗೆ ಬೆವರಿನಲ್ಲಿರುವ ಇಂಗಾಲದ ಡಯಾಕ್ಸೈಡ್ ಸಹ ಈ ಕ್ರಿಯೆಯಲ್ಲಿ ಸಹಕರಿಸುತ್ತದೆ. ಸೊಳ್ಳೆಗಳು ಗಂಡಸರಿಗಿಂತಲೂ ಹೆಂಗಸರನ್ನು ಕಾಡುವುದು ಹೆಚ್ಚು. ಕಾಡುವ ಪ್ರಮಾಣ ಆಕೆಯ ಋತು ಚಕ್ರವನ್ನು ಅವಲಂಬಿಸಿರುತ್ತದೆ. ಅವು ಋತುಚಕ್ರದ 13-18 ದಿವಸಗಳಲ್ಲಿ ಕಾಡುವುದು ಹೆಚ್ಚು.

ನಮಗೆ ತಿಳಿಯದಂತೆಯೇ ನಾವು ವಾಸನಾದ್ರವ್ಯಗಳನ್ನು ಉತ್ಪಾದಿಸಿ, ನಮ್ಮ ಕಣ್ಣ ಮುಂದೆಯೇ ಅವುಗಳ ಪರಿಣಾಮ ಕಾಣುತ್ತಿದ್ದರೂ, ನಾವು ಅವುಗಳನ್ನು ತಿಳಿಯದಿರಲು ಸಾಧ್ಯವಿದೆ. ಸಾಮಾನ್ಯವಾಗಿ ಒಬ್ಬರು ಆಕಳಿಸಿದಾಗ ಮತ್ತೊಬ್ಬರು ಆಕಳಿಸುವುದನ್ನು ಗಮನಿಸಿರಬಹುದು.

ಆಕಳಿಸಿದಾಗ ಉತ್ಪಾದನೆಯಾಗುವ, ಆವಿಯಾಗಬಲ್ಲ ಯಾವುದಾದರೂ ವಾಸನಾದ್ರವ್ಯ ಇದಕ್ಕೆ ಕಾರಣವಾಗಿರಬಹುದೇ? ಅಂತೆಯೇ ಅಳುವಾಗ, ನಗುವಾಗ, ಸೀನುವಾಗ, ಕೆಮ್ಮುವಾಗ, ಕೆರೆಯುವಾಗ ಅನೇಕ ವಾಸನಾದ್ರವ್ಯಗಳು ಉತ್ಪಾದನೆಯಾಗುತ್ತಿರಬಹುದು. ಇದರ ಬಗ್ಗೆ ವಿವರವಾದ ಸಂಶೋಧನೆ ಅಗತ್ಯವಿದೆ.

ಮಾನವರಲ್ಲಿ ವಾಸನಾದ್ರವ್ಯೋತ್ಪಾದಕ ಗ್ರಂಥಿಗಳು ಇನ್ನೂ ಪ್ರಾಥಮಿಕಾವಸ್ಥೆಯಲ್ಲೇ ಇವೆಯೆನ್ನಲಾಗಿದೆ. ಇಂಥ ಗ್ರಂಥಿಗಳು, ಮಾನವರಲ್ಲಿ ತಲೆಯಿಂದ ಕಾಲಿನವರೆಗೂ ಹರಡಿವೆ. ಕಂಕುಳ ಗ್ರಂಥಿಗಳು, ಸ್ತನ ತೊಟ್ಟಿನ ಸುತ್ತಲಿರುವ ಕೆಂಪಾದ ಪ್ರದೇಶದಲ್ಲಿರುವ ಗ್ರಂಥಿಗಳು, ತುಟಿಯಲ್ಲಿನ ಗ್ರಂಥಿಗಳು, ಲೈಂಗಿಕಾಂಗಗಳ ಸುತ್ತಲಿರುವ ಗ್ರಂಥಿಗಳು, ಕುತ್ತಿಗೆ ಸುತ್ತಲಿರುವ ಗ್ರಂಥಿಗಳು, ಶ್ರವಣನಳಿಕೆಯಲ್ಲಿನ ಗುಗ್ಗುತ್ಪಾದಕ ಗ್ರಂಥಿಗಳು, ಕಣ್ಣು ರೆಪ್ಪೆಯಲ್ಲಿನ ಗ್ರಂಥಿಗಳು ಇವುಗಳಲ್ಲಿ ಮುಖ್ಯವಾದವು.

ಇಲ್ಲಿ ನಾವು ಗಮನಿಸಬಹುದಾದ ಒಂದು ಅಂಶವೆಂದರೆ ಭಾರತೀಯ ಪ್ರಾಚೀನ ಕಾಮಶಾಸ್ತ್ರಜ್ಞರಾದ ವಾತ್ಸಾಯನ, ನಂದಿಕೇಶ, ಸಾಣಿಕಾಪುತ್ರ, ಮುಂತಾದವರು ಮೇಲೆ ತಿಳಿಸಿದ ಅಂಗಾಂಗಗಳಿಗೆ ಪ್ರಾಮುಖ್ಯವನ್ನು ನೀಡಿದ್ದು, ಅವುಗಳನ್ನು ಕಾಮೋತ್ತೇಜಕ ಅಂಗಾಂಗಗಳೆಂದು ಪರಿಗಣಿಸಿರುವುದು. ಇವುಗಳಿಂದ ಉತ್ಪಾದನೆಯಾಗುವ ವಾಸನೆಯು ಗಂಡಸರಲ್ಲಿ ಕಾಮವನ್ನು ಕೆರಳಿಸುತ್ತದೆ.

ಅಂತೆಯೇ ದೇಹದ ವಾಸನೆಯ ಆಧಾರದ ಮೇಲೆ ಅವರು ಮಾನವರನ್ನು 4 ಮುಖ್ಯ ಗುಂಪುಗಳನ್ನಾಗಿ ವಿಂಗಡಿಸಿ, ಕೆಲವು ಪ್ರಭೇದಗಳನ್ನೂ ಮಾಡಿದ್ದಾರೆ. ಈ ಅಂಶಗಳನ್ನು ಕುರಿತು ಇಂದಿನ ವಿಜ್ಞಾನಿಗಳು ವಿವರವಾದ ಸಂಶೋಧನೆಗಳನ್ನು ಮಾಡಿದಲ್ಲಿ ವಾಸನಾ ದ್ರವ್ಯಗಳ ಬಗ್ಗೆ ಮತ್ತಷ್ಟು ತಿಳಿಯಬಹುದಾಗಿದೆ.

**- ಡಾ.ನಾ.** ಸೋಮೇಶ್ವರ

---

# ಸುಗ್ಗಿ ಕಾಲದಲ್ಲಿ ಸಫಾರಿ ಬಂದ್; ರೆಸಾರ್ಟ್‌ಗಳೆಲ್ಲ ಖಾಲಿ ಖಾಲಿ

**ಪ್ರವಾಸಿ ಋತುವಿನಲ್ಲಿಯೇ ಬಂದ್, ಆರೇಳು ತಿಂಗಳ ಬುಕ್ಕಿಂಗ್ ರದ್ದು ಮಾಡುತ್ತಿರುವ ವಿದೇಶಿ ಪ್ರವಾಸಿಗರು**

- **ಬಂಡೀಪುರ-ನಾಗರಹೊಳೆ ಭಾಗದ ರೆಸಾರ್ಟ್ ಮಾಲೀಕರು ಇಡೀ ವರ್ಷದ ಲಾಭದ ಶೇ.50ರಷ್ಟು ಲಾಭವನ್ನು ಕೇವಲ ಮೂರು ತಿಂಗಳಲ್ಲಿ ಮಾಡಿಕೊಳ್ಳುತ್ತಿದ್ದರು. ಆದರೆ ಅರಣ್ಯ ಇಲಾಖೆಯ ಅವೈಜ್ಞಾನಿಕ ಸಫಾರಿ ನಿರ್ಬಂಧದ ತೀರ್ಮಾನದಿಂದಾಗಿ, ನಷ್ಟ ಇರಲಿ, ಇಷ್ಟು ವರ್ಷದ ಲಾಭವನ್ನೂ ಕಳೆದು ಕೊಳ್ಳುವ ಆತಂಕ ರೆಸಾರ್ಟ್ ಮಾಲೀಕರದ್ದಾಗಿದೆ.**

ಬಂಡೀಪುರ-ನಾಗರಹೊಳೆ ಭಾಗದ ರೆಸಾರ್ಟ್ ಮಾಲೀಕರು ಇಡೀ ವರ್ಷದ ಲಾಭದ ಶೇ.50ರಷ್ಟು ಲಾಭವನ್ನು ಕೇವಲ ಮೂರು ತಿಂಗಳಲ್ಲಿ ಮಾಡಿಕೊಳ್ಳುತ್ತಿದ್ದರು. ಆದರೆ ಅರಣ್ಯ ಇಲಾಖೆಯ ಅವೈಜ್ಞಾನಿಕ ಸಫಾರಿ ನಿರ್ಬಂಧದ ತೀರ್ಮಾನದಿಂದಾಗಿ, ನಷ್ಟ ಇರಲಿ, ಇಷ್ಟು ವರ್ಷದ ಲಾಭವನ್ನೂ ಕಳೆದುಕೊಳ್ಳುವ ಆತಂಕ ರೆಸಾರ್ಟ್ ಮಾಲೀಕರದ್ದಾಗಿದೆ.

ಸಾಮಾನ್ಯವಾಗಿ ನವೆಂಬರ್‌ನಿಂದ ಫೆಬ್ರವರಿ ಮೊದಲ ವಾರದವರೆಗೆ ಬಂಡೀಪುರ, ನಾಗರಹೊಳೆ ಭಾಗಕ್ಕೆ ಪ್ರವಾಸಕ್ಕೆಂದು ಪ್ರವಾಸಿಗರು ಆಗಮಿಸುತ್ತಾರೆ. ಇಡೀ ವರ್ಷ ಮಾಡಿಕೊಳ್ಳುವ ಲಾಭದ ಶೇ.50ರಷ್ಟು ಲಾಭ ಈ ಮೂರ್ನಾಲ್ಕು ತಿಂಗಳಲ್ಲಿ ರೆಸಾರ್ಟ್ ಮಾಡಿಕೊಳ್ಳುತ್ತಾರೆ. ಅದರರ್ಥ, ಈ ಮೂರ್ನಾಲ್ಕು ತಿಂಗಳು ವೈಲ್ಡ್ ಲೈಫ್ ಪ್ರವಾಸೋದ್ಯಮದ ಸುಗ್ಗಿ ಕಾಲ. ಆದರೆ ಹೆಡಿಯಾಳದಲ್ಲಿ ನಡೆದ ಹುಲಿ ದಾಳಿಗೆ ಕಾರಣ ತಿಳಿದುಕೊಳ್ಳುವ ಗೋಜಿಗೆ ಹೋಗದೆ, ಸಫಾರಿಯನ್ನು ಏಕಾಏಕಿ ನಿಲ್ಲಿಸಿದ್ದರಿಂದ ಲಾಭದ ನಿರೀಕ್ಷೆಯಲ್ಲಿದ್ದ ರೆಸಾರ್ಟ್ ಮಾಲೀಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಸಾಮಾನ್ಯವಾಗಿ ಕಬಿನಿ, ಬಂಡೀಪುರ ಸುತ್ತಮುತ್ತಲಿನ ಐಷಾರಾಮಿ ರೆಸಾರ್ಟ್‌ಗಳು ಸೇರಿದಂತೆ ಎಲ್ಲ ರೆಸಾರ್ಟ್‌ಗಳು ವಾರಾಂತ್ಯದಲ್ಲಿ ಶೇ.85ರಿಂದ 80ರಷ್ಟು ಭರ್ತಿಯಾಗಿರುತ್ತಿತ್ತು.

ಇನ್ನುಳಿದ ದಿನದಲ್ಲಿ ಶೇ.60ರಷ್ಟು ಭರ್ತಿಯಾಗಿರುತ್ತಿತ್ತು. ಆದರೀಗ ವಾರಾಂತ್ಯದಲ್ಲಿಯೇ ರೆಸಾರ್ಟ್‌ಗಳು ಶೇ.40ರಷ್ಟು ಭರ್ತಿಯಾದರೆ ಹೆಚ್ಚು ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನು ಕೆಲ ರೆಸಾರ್ಟ್‌ಗಳಲ್ಲಿ ಪ್ರವಾಸಿಗರ ಸಂಖ್ಯೆ ಶೂನ್ಯಕ್ಕೆ ಇಳಿದಿದೆ. ಆದರೆ ಒಂದೊಂದು ರೆಸಾರ್ಟ್‌ನಲ್ಲಿ 30 ರಿಂದ 40 ಸಿಬ್ಬಂದಿಯಿರುವುದರಿಂದ, ಅವರನ್ನು ಕೆಲಸದಿಂದ ತೆಗೆಯಲು ಆಗದೇ, ವೇತನ ಕೊಟ್ಟು ಉಳಿಸಿಕೊಳ್ಳಲು ಆಗದಂತಹ ಸ್ಥಿತಿಗೆ ಮಾಲೀಕರು ಬಂದಿದ್ದಾರೆ.

ವಿದೇಶಿ ಪ್ರವಾಸಿಗರು ಆರೇಳು ತಿಂಗಳ ಮೊದಲೇ ತಮ್ಮ ಬುಕ್ಕಿಂಗ್ ಮಾಡಿಕೊಂಡಿರುತ್ತಾರೆ. ಆದರೆ ಕಳೆದ ನಾಲ್ಕು ತಿಂಗಳಿನಿಂದ ಸಫಾರಿ ನಿರ್ಬಂಧ ಹೇರಿರುವುದರಿಂದಾಗಿ ಮುಂದಿನ ಆರು ತಿಂಗಳು ಅಂದರೆ, ಜುಲೈ, ಆಗಸ್ಟ್ ಸಮಯಕ್ಕೆ ಮಾಡಿ ಕೊಂಡಿರುವ ಬುಕ್ಕಿಂಗ್ ಕ್ಯಾನ್ಸಲ್ ಮಾಡಿಕೊಳ್ಳುತ್ತಿದ್ದಾರೆ.

**ರೆಸಾರ್ಟ್‌ಗಳಿಗೆ ಬೀಗಮುದ್ರೆ?:** ಕಬಿನಿ ಸುತ್ತಮುತ್ತಲ ಐಷಾರಾಮಿ ರೆಸಾರ್ಟ್‌ಗಳ ಮಾಲೀಕರು ಸಫಾರಿ ಪುನಾರಂಭವಾಗುವ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲದಿರುವುದರಿಂದ ನೂರಾರು ಕಾರ್ಮಿಕರಿಗೆ ಸಂಬಳ ಕೊಡುವುದು ಹೇಗೆ ಎನ್ನುವ ಆತಂಕದಲ್ಲಿದ್ದಾರೆ. ಕೆಲ ರೆಸಾರ್ಟ್ ಮಾಲೀಕರು, ಇನ್ನೊಂದು ತಿಂಗಳಲ್ಲಿ ಸಫಾರಿ ಪುನಾರಂಭವಾಗದಿದ್ದರೆ ರೆಸಾರ್ಟ್‌ಗಳನ್ನು ಮುಚ್ಚಿಕೊಂಡು ಹೋಗುತ್ತೇವೆ. ಖಾಲಿ ಕೋಣೆಗಳ ನಿರ್ವಹಣೆ, ವೇತನ ನೀಡುವುದಕ್ಕಿಂತ ರೆಸಾರ್ಟ್‌ಗಳನ್ನೇ ಮುಚ್ಚುವುದು ಸೂಕ್ತ ಎನ್ನುವ ಮಾತುಗಳನ್ನು ಆಡುತ್ತಿದ್ದಾರೆ.

**ಸಫಾರಿ ಚಾಲಕರು ಬೀದಿಗೆ:** ಈ ಹಿಂದೆ ಸಫಾರಿ ವಾಹನಗಳನ್ನು ಚಲಾಯಿಸುತ್ತಿದ್ದ ಚಾಲಕರನ್ನು ಅರಣ್ಯ ಇಲಾಖೆ, ಜಂಗಲ್ ಲಾಡ್ಜ್ ನಿಗಮದವರು ಗುತ್ತಿಗೆಯ ಮೇಲೆ ತೆಗೆದುಕೊಂಡಿದ್ದರು. ಆದರೆ ಸಫಾರಿಯನ್ನು ನಾಲ್ಕು ತಿಂಗಳಿನಿಂದ ನಡೆಸದೇ ಇರುವುದರಿಂದ ಅವರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಈ ರೀತಿ ಕೆಲಸ ಕಳೆದುಕೊಂಡಿರುವ ಬಹುಪಾಲು ಚಾಲಕರಿಗೆ, ಸಫಾರಿಯಲ್ಲಿ ವಾಹನ ಚಲಾಯಿಸುವುದರ ಹೊರತು ಬೇರೇನೂ ಕೆಲಸ ಗೊತ್ತಿಲ್ಲ. ಇದೀಗ ಈ ಚಾಲಕರು ಸಫಾರಿಯ ಹೊರತಾಗಿ ಮುಂದೇನು ಮಾಡಬೇಕು ಎನ್ನುವುದು ತಿಳಿಯದೆ, ಮಾನಸಿಕವಾಗಿ ಕುಗ್ಗಿ ಹೋಗಿದ್ದಾರೆ ಎನ್ನುವ ಮಾತುಗಳನ್ನು ಕೆಲ ರೆಸಾರ್ಟ್ ಮಾಲೀಕರು ಹೇಳುತ್ತಾರೆ.

> ಕೈಗಾರಿಕೆಗಳಿಗೆ ನೀಡುವಂತೆ ರೆಸಾರ್ಟ್‌ಗಳ ಆರಂಭಕ್ಕೆ ಸರಕಾರ ವಿಶೇಷ ರಿಯಾಯಿತಿ ಅಥವಾ ಜಾಗವನ್ನು ನೀಡುವುದಿಲ್ಲ. ಸಾಲದಲ್ಲಿಯೇ ರೆಸಾರ್ಟ್‌ಗಳನ್ನು ಕಟ್ಟಿರುತ್ತೇವೆ. ಆದರೆ ಯಾವುದೇ ಸಕಾರಣವಿಲ್ಲದೇ ಸಫಾರಿಯನ್ನು ನಿರ್ಬಂಧಿಸುವ ಮೂಲಕ ಪ್ರವಾಸೋದ್ಯಮಕ್ಕೆ ಬಹುದೊಡ್ಡ ಹೊಡೆತವನ್ನು ಸರಕಾರ ನೀಡಿದೆ. ಅರಣ್ಯ ಸಚಿವರ ಈ ಅವೈಜ್ಞಾನಿಕ ತೀರ್ಮಾನದಿಂದ ರೆಸಾರ್ಟ್‌ನಲ್ಲಿ ಕೆಲಸ ಮಾಡುವ ಕಾರ್ಮಿಕರು ಮಾತ್ರವಲ್ಲದೇ, ಮಾಲೀಕರು ಬೀದಿಗೆ ಬರುವ ಸ್ಥಿತಿಗೆ ಬಂದಿದ್ದೇವೆ.
>
> - ಹೆಸರು ಹೇಳಲು ಇಚ್ಚಿಸದ ರೆಸಾರ್ಟ್ ಮಾಲೀಕ

**ಕೇರಳ, ತ.ನಾಡಿಗೆ ಆದಾಯ:** ಕೆಲ ರೆಸಾರ್ಟ್ ಮಾಲೀಕರು ಪ್ರವಾಸಿಗರನ್ನು ಉಳಿಸಿಕೊಳ್ಳಲು ಪ್ರವಾಸಿಗರನ್ನು ನೆರೆ ರಾಜ್ಯದ ವಯನಾಡು, ಮದುಮಲೈನಲ್ಲಿರುವ ಸಫಾರಿಗೆ ಕರೆದುಕೊಂಡು ಹೋಗುತ್ತಿದ್ದಾರೆ. ಈ ರೆಸಾರ್ಟ್ ಗಳಿಂದ ನೆರೆ ರಾಜ್ಯದ ಸಫಾರಿಗಳು 15ರಿಂದ 20 ಕಿ.ಮೀ. ದೂರವಿದ್ದರೂ ಪ್ರವಾಸಿಗರನ್ನು ಸೆಳೆಯಲು ಈ ರೀತಿ ಮಾಡುತ್ತಿದ್ದಾರೆ. ಕರ್ನಾಟಕದ ರೆಸಾರ್ಟ್‌ನವರೂ ಅಲ್ಲಿನ ಸಫಾರಿಗೆ ಕರೆದುಕೊಂಡು ಹೋಗುತ್ತಿರುವುದರಿಂದ ಸಹಜವಾಗಿಯೇ ಅಲ್ಲಿ ಸಫಾರಿ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದ ಕಾಯುವಿಕೆಯ ಸಮಯ ಹಾಗೂ ಸಫಾರಿಗೆ ಕರೆದುಕೊಂಡು ಹೋಗುವ ಸಮಯದಲ್ಲಿಯೂ ತೀವ್ರ ಸಮಸ್ಯೆಯಾಗುತ್ತಿದೆ.

**- ರಂಜಿತ್ ಎಚ್** ಅಶ್ವತ್ಥ



---

# ನೈಸರ್ಗಿಕ ಅರಣ್ಯಕ್ಕೆ ಕುಂದು ತಂದಿದ್ದು ಯಾರು?

**ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿ 3 ರಿಂದ 1 ಕಿಮೀ.ಗೆ ಇಳಿಕೆ ವನ್ಯ ಸಂಘರ್ಷದ ಮೂಲ**

ಸಫಾರಿಯನ್ನು ನಿರ್ಬಂಧಿಸಿರುವ ಅರಣ್ಯ ಇಲಾಖೆ ಸಚಿವರಿಗೆ, ಅರಣ್ಯವನ್ನು ಕಾಪಾಡಲು ಪರಿಸರ ಸೂಕ್ಷ್ಮ ಪ್ರದೇಶವನ್ನು ತಗ್ಗಿಸಬಾರದು ಎನ್ನುವ ಸಣ್ಣ ಆಲೋಚನೆಯೂ ಬಂದಂತಿಲ್ಲ. 60 ವರ್ಷಗಳಿಂದ ಇಲ್ಲಿ ಹುಲಿ ದಾಳಿಯ ಗಲಾಟೆ ಏಕಾಏಕಿ ಶುರುವಾಗಲೂ, ಅರಣ್ಯ ಇಲಾಖೆಯ ಕೆಟ್ಟ ತೀರ್ಮಾನವೇ ಕಾರಣ ಎನ್ನಲಾಗುತ್ತಿದೆ.

ಈ ಹಿಂದೆ ಬಂಡೀಪುರ, ನಾಗರಹೊಳೆ ಭಾಗದಲ್ಲಿ ಅರಣ್ಯದ ಅಂಚಿನಿಂದ ಮೂರು ಕಿಮೀ ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ, ಆ ಪ್ರದೇಶದಲ್ಲಿ ಯಾವುದೇ ಕಟ್ಟಡ ಕಾಮಗಾರಿಗೆ ಅಥವಾ ಕೃಷಿಗೆ ಅವಕಾಶ ನೀಡುತ್ತಿರಲಿಲ್ಲ. ಇದರಿಂದ ಪ್ರಾಣಿಗಳು ಕಾಡಿನಿಂದ ಹೊರ ಬಂದರೂ ಮನುಷ್ಯರ ಸಂಪರ್ಕ ಸಿಗುತ್ತಿರಲಿಲ್ಲ. ಆದರೆ ಸಚಿವ ಸಂಪುಟ ಉಪಸಮಿತಿ ಈ ನಿರ್ಬಂಧವನ್ನು ಮೂರು ಕಿಮೀ ನಿಂದ ಒಂದು ಕಿಲೋ ಮೀಟರ್‌ಗೆ ಇಳಿಸಿದೆ.

ಸಂಪುಟ ಉಪಸಮಿತಿಯ ಈ ತೀರ್ಮಾನದಿಂದ ಕಾಡಿನ ಸಮೀಪ ಕಟ್ಟಡ ಕಾಮಗಾರಿಗಳ ಭಾರಿ ಪ್ರಮಾಣದಲ್ಲಿ ನಡೆಯುತ್ತಿವೆ. ಇದರಿಂದ ನೈಸರ್ಗಿಕ ಅರಣ್ಯ ಹಾಗೂ ವನ್ಯಜೀವಿಗಳಿಗೆ ಸಮಸ್ಯೆಯಾಗುತ್ತಿದೆ. ಇಂತಹ ಸೂಕ್ಷ್ಮ ವಿಷಯವನ್ನು ತಜ್ಞರು, ಸ್ಥಳೀಯರೊಂದಿಗೆ ಚರ್ಚಿಸದೇ ಏಕಾಏಕಿ ತೀರ್ಮಾನ ಕೈಗೊಂಡಿರುವ ಅರಣ್ಯ ಇಲಾಖೆ, ಇದೇ ರೀತಿ ಸಫಾರಿ ನಿರ್ಬಂಧಿಸುವ ಬಾಲಿಶ ತೀರ್ಮಾನವನ್ನು ಕೈಗೊಂಡಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

**ಕಾಡಂಚಿನಲ್ಲಿ ಶುಂಠಿ ಹಾವಳಿ:** ಪರಿಸರ ಸೂಕ್ಷ್ಮ ಪ್ರದೇಶದ ಪ್ರಮಾಣವನ್ನು ತಗ್ಗಿಸಿದ್ದರಿಂದ ಕೇರಳ ಹಾಗೂ ಕರ್ನಾಟಕದವರು ಬಂಡೀಪುರ ಹಾಗೂ ನಾಗರಹೊಳೆ ಅಭಯಾರಣ್ಯಕ್ಕೆ ಹೊಂದಿ ಕೊಂಡಂತೆ ಜಮೀನು ಖರೀದಿಸಿ, ಶುಂಠಿ ಖರೀದಿಸುತ್ತಿದ್ದಾರೆ. ಒಮ್ಮೆ ಶುಂಠಿ ಬೆಳೆದರೆ, ಮತ್ತೊಮ್ಮೆ ಅದೇ ಜಮೀನಿನಲ್ಲಿ ಬೆಳೆಯಲು ಸಾಧ್ಯವಿಲ್ಲ ಎನ್ನುವ ಕಾರಣಕ್ಕೆ ಹೊಸ ಹೊಸ ಜಮೀನುಗಳನ್ನು ಖರೀದಿಸುತ್ತಿದ್ದಾರೆ.

ಈ ರೀತಿ ಹೊಸದಾಗಿ ಖರೀದಿಸುವವರು, ಹೆಡಿಯಾಳ, ಸರಗೂರು ಸುತ್ತಮುತ್ತ ಪರಿಸರ ಸೂಕ್ಷ್ಮ ಪ್ರದೇಶದ ಮೇಲೆ ಕಣ್ಣಿಟ್ಟು ಜಮೀನು ಮಾಡುತ್ತಿದ್ದಾರೆ. ಇದು ಮಾನವ-ವನ್ಯಜೀವಿಗಳ ಸಂಘರ್ಷಕ್ಕೆ ಪ್ರಮುಖ ಕಾರಣವಾಗಿದೆ.



ಸ್ಥಳೀಯ ಮಟ್ಟದ ಅಧಿಕಾರಿಗಳಿಗೆ, ರೆಸಾರ್ಟ್, ಹೋಮ್ ಸ್ಟೇ ಮಾಲೀಕರಿಗೆ, ಸ್ಥಳೀಯ ಜನರಿಗೆ ಈ ವಿಷಯ ಗೊತ್ತಿದ್ದರೂ ಅರಣ್ಯ ಇಲಾಖೆಯ ಮೇಲಾಧಿಕಾರಿಗಳು, ಸಚಿವರು ಇದನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಭೌಗೋಳಿಕವಾಗಿ ಎದುರಾಗುತ್ತಿರುವ, ಪ್ರಾಕ್ಟಿಕಲ್ ಸಮಸ್ಯೆಯನ್ನು ಗಮನಿಸದೇ, ದಾಳಿ ನಡೆಯುತ್ತಿರುವ ಸ್ಥಳದಿಂದ 60 ಕಿಮೀ ದೂರದಲ್ಲಿರುವ ಸಫಾರಿಗೆ ನಿರ್ಬಂಧಿಸುವ ಕೆಟ್ಟ ತೀರ್ಮಾನ ಕೈಗೊಳ್ಳುವುದಷ್ಟೇ, ತಮ್ಮ ತೀರ್ಮಾನವೇ ಸರಿ ಎನ್ನುವ ಭಂಡತನ ಪ್ರದರ್ಶನ ಮಾಡುತ್ತಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

**ಅರಣ್ಯದೊಳಗೆ ಜೆಸಿಬಿಗೇನು ಕೆಲಸ?:** ಮಾನವ-ವನ್ಯಜೀವಿಗಳ ಸಂಘರ್ಷ ತಡೆಗೆ ಎನ್ನುವ ಬಾಲಿಶ ಕಾರಣ ನೀಡಿ ಸಫಾರಿಯನ್ನು ಸ್ಥಗಿತ ಗೊಳಿಸಿರುವ ಅರಣ್ಯ ಇಲಾಖೆ ಅಧಿಕಾರಿಗಳೇ ಅಭಯಾರಣ್ಯ, ದಟ್ಟ ಕಾನನದೊಳಗೆ ಜೆಸಿಬಿಗಳನ್ನು ಬಿಟ್ಟು ಕೆಲಸ ಮಾಡಿಸುತ್ತಿದ್ದಾರೆ. ಹಾಗೇ ನೋಡಿದರೆ, ನೈಸರ್ಗಿಕವಾಗಿ ಅರಣ್ಯವಿರುವಂತೆ ನೋಡಿ ಕೊಳ್ಳುವುದಷ್ಟೇ ಸಿಬ್ಬಂದಿಯ ಕೆಲಸ. ಅರಣ್ಯದೊಳಗೆ ಬೀಳುವ ಮರಗಳನ್ನು ತೆರವು ಗೊಳಿಸುವ ಅಥವಾ ಸಾಯುವ ಪ್ರಾಣಿಗಳನ್ನಾಗಿ ಎತ್ತುವ ಅಧಿಕಾರವೂ ಅರಣ್ಯ ಇಲಾಖೆಯ ಸಿಬ್ಬಂದಿಗಳಿಲ್ಲ. ಹೀಗಿರುವಾಗ, ಅರಣ್ಯದೊಳಗೆ ಜೆಸಿಬಿಗಳನ್ನು ಬಿಟ್ಟು ಕೆಲಸ ಮಾಡಲು ಅಧಿಕಾರ ನೀಡಿದ್ಯಾರು? ಈ ರೀತಿ ಜೆಬಿಸಿಗಳನ್ನು ಬಳಸಿಕೊಂಡು ಮಾಡಿರುವ ಕೆಲಸಗಳಿಂದಲೇ ವನ್ಯಜೀವಿಗಳಿಗೆ ಬೇಕಿರುವಂತಹ ಸ್ಥಳ ಇಲ್ಲವಾಗಿದೆ ಎನ್ನುವ ಆರೋಪವಿದೆ.

---

# ರಾಜಸ್ಥಾನದ ನಿಗೂಢ ಕಿರಾಡು ದೇವಾಲಯಗಳು

ರಾಜಸ್ಥಾನದ ಬರ್ಮರ್ ಜಿಲ್ಲೆಯ ಥಾರ್ ಮರುಭೂಮಿಯಲ್ಲಿ ಸುಮಾರು 35 ಕಿ.ಮೀ. ದೂರದಲ್ಲಿ ನೆಲೆಸಿರುವ ಕಿರಾಡು ದೇವಾಲಯಗಳು ಭಾರತದ ಅತ್ಯಂತ ನಿಗೂಢ ಮತ್ತು ಐತಿಹಾಸಿಕ ಸ್ಥಳಗಳಲ್ಲಿ ಒಂದು. ಈ ದೇವಾಲಯಗಳನ್ನು ರಾಜಸ್ಥಾನದ ಖಜುರಾಹೋ ಎಂದು ಕರೆಯಲಾಗುತ್ತದೆ, ಆದರೆ ಇದರ ಹಿಂದಿರುವ ಶಾಪದ ಕಥೆಯಿಂದಾಗಿ ಇದು ಭಯಾನಕತೆಯನ್ನು ಸೃಷ್ಟಿಸುತ್ತದೆ. ಸಂಜೆಯಾದಂತೆಲ್ಲಾ ಇಲ್ಲಿ ಯಾರೂ ಉಳಿಯದಂತೆ ನೋಡಿಕೊಳ್ಳುವ ಸ್ಥಳೀಯರು, ರಾತ್ರಿ ಸಮಯದಲ್ಲಿ ಇಲ್ಲಿ ಉಳಿದರೆ ಕಲ್ಲಾಗಿ ಬದಲಾಗುತ್ತಾರೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಈ ಲೇಖನದಲ್ಲಿ ಕಿರಾಡು ದೇವಾಲಯಗಳ ಇತಿಹಾಸ, ವಾಸ್ತುಶಿಲ್ಪ, ಶಾಪದ ಕಥೆ ಮತ್ತು ಪ್ರವಾಸೋದ್ಯಮದ ಬಗ್ಗೆ ವಿವರವಾಗಿ ತಿಳಿಯೋಣ.

**ಇತಿಹಾಸದ ಹಿನ್ನೆಲೆ:** ಕಿರಾಡು ದೇವಾಲಯಗಳು 11ನೇ ಮತ್ತು 12ನೇ ಶತಮಾನದಲ್ಲಿ ನಿರ್ಮಾಣಗೊಂಡವುಗಳು. ಇವುಗಳನ್ನು ಚಾಳುಕ್ಯ (ಸೋಲಂಕಿ) ರಾಜರ ಅಧೀನದಲ್ಲಿದ್ದ ಸಾಮಂತರು ಅಥವಾ ಪರಮಾರ ರಾಜವಂಶದ ರಾಜರು ನಿರ್ಮಿಸಿದ್ದರು ಎಂದು ಉಲ್ಲೇಖಗಳಿವೆ. ಮೂಲತಃ ಈ ಸ್ಥಳವು ಕಿರಾಡ್ ಕೋಟ್ ಎಂದು ಕರೆಯಲ್ಪಡುತ್ತಿತ್ತು ಮತ್ತು ಸುಮಾರು 108 ದೇವಾಲಯಗಳನ್ನು ಹೊಂದಿತ್ತು. ಆದರೆ ಮುಸ್ಲಿಂ ಆಕ್ರಮಣಕಾರರು, ಭೂಕಂಪಗಳು ಮತ್ತು ಮರುಭೂಮಿಯ ಗಾಳಿ-ಮಳೆಯಿಂದಾಗಿ ಇಂದು ಕೇವಲ ಐದು ದೇವಾಲಯಗಳು ಮಾತ್ರ ಉಳಿದಿವೆ. ಇವುಗಳಲ್ಲಿ ನಾಲ್ಕು ಶಿವನಿಗೆ ಮತ್ತು ಒಂದು ವಿಷ್ಣುವಿಗೆ ಸಮರ್ಪಿತವಾಗಿವೆ. ಮಹಮೂದ್ ಘಜ್ನಿ ಮತ್ತು ದೆಹಲಿ ಸುಲ್ತಾನರ ಆಕ್ರಮಣಗಳ ನಡುವೆಯೂ ಈ ದೇವಾಲಯಗಳು ನಿರ್ಮಾಣಗೊಂಡವು ಎಂಬುದು ಗಮನಾರ್ಹ. ಗ್ರಾಮೀಣ ಜನಪದ ಕಥೆಗಳ ಪ್ರಕಾರ, ಈ ಸ್ಥಳವು ಒಂದುಕಾಲದಲ್ಲಿ ಜನನಿಬಿಡವಾದ ನಗರವಾಗಿತ್ತು, ಆದರೆ ಒಂದು ಶಾಪದಿಂದಾಗಿ ನಿರ್ಜನವಾಯಿತು.

**ವಾಸ್ತುಶಿಲ್ಪದ ವೈಭವ:** ಕಿರಾಡು ದೇವಾಲಯಗಳು ಸೋಲಂಕಿ ಶೈಲಿಯ ವಾಸ್ತುಶಿಲ್ಪಕ್ಕೆ ಉದಾಹರಣೆಯಾಗಿವೆ. ಮರಳುಗಲ್ಲಿನಿಂದ ನಿರ್ಮಿತವಾದ ಈ ದೇವಾಲಯಗಳಲ್ಲಿ ಸಂಕೀರ್ಣ ಕೆತ್ತನೆಗಳು, ಸ್ತಂಭಗಳು, ಗೋಪುರಗಳು ಮತ್ತು ಶಿಲ್ಪಗಳು ಕಂಡುಬರುತ್ತವೆ. ಮುಖ್ಯ ದೇವಾಲಯವಾದ ಸೋಮೇಶ್ವರ ದೇವಾಲಯವು ಶಿವನಿಗೆ ಸಮರ್ಪಿತವಾಗಿದ್ದು, ಇದು ಅತ್ಯಂತ ಉತ್ತಮ ಸ್ಥಿತಿಯಲ್ಲಿದೆ. ದೇವಾಲಯದ ಸ್ತಂಭಗಳು ಅಷ್ಟಭುಜಾಕಾರದಲ್ಲಿದ್ದು, ರಾಮಾಯಣ, ಮಹಾಭಾರತದ ದೃಶ್ಯಗಳು, ವಿಷ್ಣುವಿನ ಅವತಾರಗಳು, ಆನೆ-ಕುದುರೆ ಸವಾರರು, ಯುದ್ಧ ದೃಶ್ಯಗಳು ಮತ್ತು ದೈನಂದಿನ ಜೀವನದ ಚಿತ್ರಣಗಳನ್ನು ಹೊಂದಿವೆ. ಕೆಲವು ಕೆತ್ತನೆಗಳಲ್ಲಿ ಡೈನೋಸಾರ್‌ಗಳಂತಹ ಜೀವಿಗಳ ಚಿತ್ರಣವೂ ಕಂಡುಬರುತ್ತದೆ ಎಂದು ಹೇಳಲಾಗುತ್ತದೆ. ನಾಗರ ಶೈಲಿಯಲ್ಲಿ ನಿರ್ಮಿತವಾದ ಈ ದೇವಾಲಯಗಳ ಗೋಪುರಗಳು ಆಕಾಶಕ್ಕೆ ಮುಟ್ಟುವಂತಿದ್ದು, ಖಜುರಾಹೋ ಮತ್ತು ಕೋಣಾರ್ಕ ದೇವಾಲಯಗಳೊಂದಿಗೆ ಹೋಲಿಕೆಗೆ ಒಳಗಾಗುತ್ತವೆ.

**ಶಾಪದ ನಿಗೂಢ ಕಥೆ:** ಕಿರಾಡು ದೇವಾಲಯಗಳ ಹಿಂದಿರುವ ಅತ್ಯಂತ ಆಕರ್ಷಣೀಯ ಅಂಶವೆಂದರೆ ಇದರ ಶಾಪದ ಕಥೆ. ಜನಪದ ಕಥೆಯ ಪ್ರಕಾರ, ಒಂದುಕಾಲದಲ್ಲಿ ಒಬ್ಬ ಋಷಿಯು ತನ್ನ ಶಿಷ್ಯನನ್ನು ಗ್ರಾಮಸ್ಥರ ಆರೈಕೆಗೆ ಒಪ್ಪಿಸಿ ತೀರ್ಥಯಾತ್ರೆಗೆ ಹೊರಟನು. ಆದರೆ ಶಿಷ್ಯನು ಅನಾರೋಗ್ಯಕ್ಕೆ ತುತ್ತಾದಾಗ ಗ್ರಾಮಸ್ಥರು ಅವನನ್ನು ನಿರ್ಲಕ್ಷಿಸಿದರು. ಕೇವಲ ಒಬ್ಬ ಕುಂಬಾರನ ಹೆಂಡತಿಯು ಮಾತ್ರ ಅವನನ್ನು ಆರೈಕೆ ಮಾಡಿದಳು. ಋಷಿಯು ಹಿಂದಿರುಗಿ ಇದನ್ನು ತಿಳಿದು ಕೋಪಗೊಂಡು, ಗ್ರಾಮಕ್ಕೆ ಶಾಪವಿತ್ತನು: ಸೂರ್ಯಾಸ್ತದ ನಂತರ ಇಲ್ಲಿ ಉಳಿದ ಯಾರೇ ಆದರೂ ಕಲ್ಲಾಗಿ ಬದಲಾಗಲಿ. ಆದರೆ ಆ ಕುಂಬಾರನ ಹೆಂಡತಿಯನ್ನು ಮಾತ್ರ ರಕ್ಷಿಸಿದನು ಮತ್ತು ಅವಳು ಗ್ರಾಮದಿಂದ ಹೊರಹೋಗುವಂತೆ ಸೂಚಿಸಿದನು. ಆದರೆ ಅವಳಿಗೆ ಹಿಂತಿರುಗಿ ನೋಡದಂತೆ ಹೇಳಿದರೂ ಅವಳು ನೋಡಿದ್ದರಿಂದ ಆಕೆಯೂ ಕಲ್ಲಾದಳು ಎಂಬ ನಂಬಿಕೆಯಿದೆ.



ಈ ಕಥೆಯಿಂದಾಗಿ ಇಂದಿಗೂ ಸ್ಥಳೀಯರು ಸಂಜೆಯ ನಂತರ ಇಲ್ಲಿ ಉಳಿಯುವುದಿಲ್ಲ ಮತ್ತು ಪ್ರವಾಸಿಗರಿಗೂ ಎಚ್ಚರಿಕೆ ನೀಡುತ್ತಾರೆ. ವೈಜ್ಞಾನಿಕವಾಗಿ ಯಾವುದೇ ಪುರಾವೆಗಳಿಲ್ಲದಿದ್ದರೂ, ಈ ಶಾಪದ ನಂಬಿಕೆಯು ಸ್ಥಳವನ್ನು ಭಯಾನಕಗೊಳಿಸಿದೆ.

**ಪ್ರವಾಸೋದ್ಯಮ ಮತ್ತು ಪ್ರಸ್ತುತ ಸ್ಥಿತಿ:** ಕಿರಾಡು ದೇವಾಲಯಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ, ವಿಶೇಷವಾಗಿ ಐತಿಹಾಸಿಕ ಮತ್ತು ಸಾಹಸಪ್ರಿಯರನ್ನು. ಹಗಲು ಸಮಯದಲ್ಲಿ ಇದು ಸುಂದರವಾಗಿ ಕಾಣುತ್ತದೆ, ಆದರೆ ಸಂಜೆಯಾದಂತೆಲ್ಲಾ ನಿರ್ಜನವಾಗುತ್ತದೆ. ರಾಜಸ್ಥಾನದ ಬರ್ಮರ್ ನಗರದಿಂದ ಕಿರಾಡು ದೇವಾಲಯಗಳಿಗೆ ಸುಲಭವಾಗಿ ತಲುಪಬಹುದು. ಆದರೆ ರಾತ್ರಿ ಸಮಯದಲ್ಲಿ ಭೇಟಿ ನೀಡುವುದು ಅಪಾಯಕಾರಿ ಎಂದು ಪರಿಗಣಿಸಲಾಗುತ್ತದೆ. ಕಿರಾಡು ದೇವಾಲಯಗಳು ಭಾರತೀಯ ಐತಿಹಾಸಿಕ ವೈಭವ ಮತ್ತು ಜನಪದ ನಂಬಿಕೆಗಳ ಸಂಯೋಜನೆಯಾಗಿವೆ. ಇದರ ವಾಸ್ತುಶಿಲ್ಪದ ಸೌಂದರ್ಯ ಮತ್ತು ಶಾಪದ ನಿಗೂಢತೆಯು ಇದನ್ನು ವಿಶಿಷ್ಟಗೊಳಿಸಿದೆ. ಪ್ರವಾಸಿಗರು ಇಲ್ಲಿಗೆ ಭೇಟಿ ನೀಡಿ ಈ ಮರುಭೂಮಿಯ ಮಧ್ಯದಲ್ಲಿರುವ ಈ ಅದ್ಭುತವನ್ನು ಅನುಭವಿಸಬಹುದು, ಆದರೆ ಸೂರ್ಯಾಸ್ತದ ಮುಂಚೆ ಹಿಂದಿರುಗುವುದು ಉತ್ತಮ!

# ಚ.ರಾ.ಪಟ್ಟಣ: ತಾಯಿ-ಮಕ್ಕಳ ಆಸ್ಪತ್ರೆಗೆ ಮನವಿ

## ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಶಾಸಕ ಸಿ.ಎನ್.ಬಾಲಕೃಷ್ಣ ಮನವಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಬೆಂಗಳೂರು ವಿಧಾನ ಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಭೇಟಿ ಮಾಡಿ, ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಚನ್ನರಾಯಪಟ್ಟಣ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ತಾಯಿ ಮತ್ತು ಮಕ್ಕಳ (ಎಂ.ಸಿ.ಎಚ್.) ಘೋಷಣೆ ಮಾಡ ಬೇಕೆಂದು ಮನವಿ ಸಲ್ಲಿಸಿದ್ದು, ಮುಖ್ಯ ಮಂತ್ರಿ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಎಂ.ಸಿ.ಹೆಚ್. ಮಂಜೂರಾತಿ ನೀಡಿ ಆಯ-ವ್ಯಯದಲ್ಲಿ ಘೋಷಣೆ ಮಾಡಬೇಕೆಂದು ಮುಖ್ಯಮಂತ್ರಿಗೆ ಮನವಿ ಮಾಡಿದರು.

ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಚನ್ನರಾಯಪಟ್ಟಣ ಸಾರ್ವಜನಿಕ ಆಸ್ಪತ್ರೆಯು ತಾಲ್ಲೂಕಿನಾದ್ಯಂತ 1.30 ಲಕ್ಷ ಜನಸಂಖ್ಯೆಗೆ ವೈದ್ಯಕೀಯ ಸೇವೆಗಳನ್ನು ಒದಗಿಸುತ್ತಿದ್ದು ಈ ಆಸ್ಪತ್ರೆಗೆ ಗಡಿಭಾಗದ ಮಂಡ್ಯ, ತುಮಕೂರು ಹಾಗೂ ಸುತ್ತಮುತ್ತಲಿನ ಸಾರ್ವಜನಿಕರು ಸಹ ಆಗಮಿಸುತ್ತಿರುವುದು ವಿಶೇಷ ಎಂದು ತಿಳಿಸಿದರು.



ಇಲ್ಲಿ ಪ್ರತಿನಿತ್ಯ 1000 ದಿಂದ 1200ರವರೆಗೆ ಹೊರ ರೋಗಿಗಳು ಹಾಗೂ 70 ರಿಂದ 80 ಒಳರೋಗಿಗಳು ಚಿಕಿತ್ಸೆಯನ್ನು ಪಡೆಯುತ್ತಿರುತ್ತಾರೆ. ಈ ಆಸ್ಪತ್ರೆಯಲ್ಲಿ ತಿಂಗಳಿಗೆ ಸರಾಸರಿ 80 ರಿಂದ 90 ಸಾಮಾನ್ಯ ಪ್ರಸೂತಿಗಳು ಹಾಗೂ 20 ರಿಂದ 30 ಶಸ್ತ್ರ ಚಿಕಿತ್ಸೆ ಮೂಲಕ ಪ್ರಸೂತಿಗಳನ್ನು ನಡೆಸಲಾಗುತ್ತಿರುತ್ತದೆಂದು ಮುಖ್ಯಮಂತ್ರಿಗೆ ಮಾಹಿತಿ ನೀಡಿದರು.

ತಾಲ್ಲೂಕು ಕೇಂದ್ರ ಚನ್ನರಾಯ ಪಟ್ಟಣವು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದ್ದು 2,93,723 ಜನ ಸಂಖ್ಯೆ ಹೊಂದಿರುತ್ತದೆ. 93 ಉಪ ಕೇಂದ್ರಗಳು, 25 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 4 ಸಮುದಾಯ ಆರೋಗ್ಯ ಕೇಂದ್ರಗಳಿಗೆ ಒಂದು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಕಾರ್ಯನಿರ್ವಹಿಸುತ್ತದೆ ಎಂದರು.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಂದ ಪ್ರಸೂತಿಗಾಗಿ ಈ ಆಸ್ಪತ್ರೆಗೆ ಕಳುಹಿಸಿ ಕೊಡಲಾಗುತ್ತದೆ. ಎಂ.ಸಿ.ಹೆಚ್. ಆಸ್ಪತ್ರೆ ಇಲ್ಲದೇ ಇರುವುದರಿಂದ ಜೊತೆಗೆ ಒಬ್ಬರೇ ಪ್ರಸೂತಿ ತಜ್ಞರು ಇರುವುದರಿಂದ ಕೆಲಸದ ಒತ್ತಡದಿಂದಾಗಿ ಮತ್ತು ಸ್ಥಳಾವ ಕಾಶದ ಕೊರತೆಯಿಂದಾಗಿ ಬಹುತೇಕ ಪ್ರಸೂತಿ ಫಲಾನುಭವಿಗಳನ್ನು ಹಾಸನದ ಜಿಲ್ಲಾ ಆಸ್ಪತ್ರೆಗೆ ಸ್ಥಳಾಂತರಿಸಲಾಗುತ್ತಿದೆಂದು ಅಸಮಾಧಾನ ವ್ಯಕ್ತಪಡಿಸಿದರು.

ತಾಲ್ಲೂಕಿನ ಎಲ್ಲಾ ಗರ್ಭಿಣೀಯರಿಗೆ ಸೇವೆಗಳನ್ನು ಒದಗಿಸಲು ಅನುಕೂಲವಾಗುವಂತೆ ಸಾರ್ವಜನಿಕ ಹಿತದೃಷ್ಟಿಯಿಂದ ಚನ್ನರಾಯಪಟ್ಟಣ ತಾಲ್ಲೂಕು ಆಸ್ಪತ್ರೆಗೆ ಎಂ.ಸಿ.ಹೆಚ್. ಆಸ್ಪತ್ರೆಯನ್ನು ಮಂಜೂರು ಮಾಡಿ ಪ್ರಸಕ್ತ ಸಾಲಿನ ಆಯ ವ್ಯಯದಲ್ಲಿ ಘೋಷಣೆ ಮಾಡ ಬೇಕೆಂದು ತಮ್ಮಲ್ಲಿ ಕೋರುತ್ತೇನೆಂದು ಮುಖ್ಯ ಮಂತ್ರಿಗಳಿಗೆ ಮನವಿ ಮಾಡಿದರು.

ಅದಕ್ಕೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಿಮ್ಮ ಬೇಡಿಕೆ ಸಾರ್ವಜನಿಕರ ಪರವಾಗಿದ್ದು ಒಳ್ಳೆಯ ಅಭಿಪ್ರಾಯವಾಗಿದೆ. ಈ ಸಾಲಿನ ಬಜೆಟ್‌ನಲ್ಲಿ ಒದಗಿಸಲು ಪ್ರಯತ್ನಿಸುತ್ತೇನೆಂದು ಭರವಸೆ ನೀಡಿದರು.

ಏನಯ್ಯ ಬಾಲಕೃಷ್ಣ, ಎಲ್ಲಿ ಸಿಕ್ಕಿದರು ಸಹ ತನ್ನ ತಾಲ್ಲೂಕಿಗೆ ಅಗತ್ಯವಿರುವ ಸೌಲಭ್ಯಗಳ ಪಟ್ಟಿ ಸಿದ್ಧಪಡಿಸಿಕೊಂಡು ಮನವಿ ಮಾಡಲು ಮೊದಲೇ ರೆಡಿಯಾಗಿದ್ದೀಯಾ. ಒಳ್ಳೆ ಕೆಲಸಗಾರ ಕಣ್ಣಯ್ಯ ನೀನು ಎಂದು ಮುಖ್ಯಮಂತ್ರಿ ನಗೆಯ ಚಟಾಕಿ ಹಾರಿಸಿದರು. ನಾನು ಸಲ್ಲಿಸಿರುವ ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಕಾರಾತ್ಮಕವಾಗಿ ಸ್ಪಂದಿಸಿ ರುತ್ತಾರೆಂದು ಶಾಸಕರು ತಿಳಿಸಿದ್ದಾರೆ.

# ಬಿಪಿಎಲ್‌ಗೆ ಆದಾಯ ಮಿತಿ ಹೆಚ್ಚಿಸಲು ಚಿಂತನೆ

• ಪ್ರಜೋದಯ ವರದಿ

**ಹಾಸನ:** ಬಿಪಿಎಲ್ ಫಲಾನುಭವಿಯಾಗಲು 1.20 ಲಕ್ಷ ರೂಪಾಯಿ ಆದಾಯ ಪ್ರಮಾಣ ಕಡ್ಡಾಯಗೊಳಿಸಿದ್ದು, ಅದನ್ನು 1.80 ಲಕ್ಷ ರೂ.ಗೆ ಹೆಚ್ಚಿಸುವ ಬಗ್ಗೆ ಚಿಂತನೆ ನಡೆದಿದೆ ಎಂದು ಸಚಿವ ಕೆ.ಹೆಚ್.ಮುನಿಯಪ್ಪ ಅವರು ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಲವು ವರ್ಷಗಳಿಂದ ಆದಾಯ ಮಿತಿ 1.20 ಲಕ್ಷ ರೂ. ಇದೆ. ಪ್ರಸ್ತುತ ದಿನಗಳ ವ್ಯಕ್ತಿಯ ವೇತನ, ಕೂಲಿ ಲೆಕ್ಕ ಹಾಕಿದರೆ ಆದಾಯ ಹೆಚ್ಚಾಗುತ್ತದೆ. ಆದ್ದರಿಂದ ಮಿತಿ ಹೆಚ್ಚಿಸುವ ಕುರಿತು ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಲಾಗುವುದು. ಅನ್ನಭಾಗ್ಯ ಯೋಜನೆಯಡಿ ಕುಟುಂಬದ ಪ್ರತಿ ಸದಸ್ಯನಿಗೆ ಕೇಂದ್ರ ಸರ್ಕಾರದಿಂದ 5 ಹಾಗು ರಾಜ್ಯ ಸರ್ಕಾರದಿಂದ 5 ಸೇರಿ 10 ಕೆ.ಜಿ. ಅಕ್ಕಿ ನೀಡಲಾಗುತ್ತಿದೆ. ಅದರಲ್ಲಿ 3 ಕೆ.ಜಿ. ರಾಗಿ ಸಹ ಸೇರಿದೆ. ವರ್ಷದಲ್ಲಿ 10 ತಿಂಗಳು ರಾಗಿಯನ್ನು ಕಡ್ಡಾಯವಾಗಿ ನೀಡಲಾಗುತ್ತದೆ. ನ್ಯಾಯಬೆಲೆ ಅಂಗಡಿಗಳು ಪಾರದರ್ಶಕವಾಗಿ ಕೆಲಸ ಮಾಡಬೇಕು. ಈ




ನಿಟ್ಟಿನಲ್ಲಿ ಅಧಿಕಾರಿಗಳು ದಿಢೀರ್ ಭೇಟಿ ನೀಡಿ ಪರಿಶೀಲಿಸುವಂತೆ ಸೂಚನೆ ನೀಡಲಾಗಿದೆ ಎಂದರು.

ಜಿಲ್ಲೆಯಲ್ಲಿ 5 ಲಕ್ಷ ಬಿಪಿಎಲ್, 1.54 ಲಕ್ಷ ಎಪಿಎಲ್ ಫಲಾನುಭವಿಗಳಿದ್ದಾರೆ. ಆಹಾರ ಇಲಾಖೆಯಿಂದ ಶೇ.82ರಷ್ಟು ಯೋಜನೆಗಳು ಪ್ರಗತಿ ಕಂಡಿವೆ. ಅನ್ನ ಸುವಿಧಾ ಸೇರಿ ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ತಲುಪಿಸುವಂತೆ ಅಧಿಕಾರಿಗಳಿಗೆ ಹೇಳಿದ್ದೇನೆ. ಅನ್ನಭಾಗ್ಯ ಯೋಜನೆಯಡಿ ಅಧಿಕ ಪ್ರಮಾಣದಲ್ಲಿ ಅಕ್ಕಿ ನೀಡುತ್ತಿರುವುದರಿಂದ ಕಾಳ ಸಂತೆಯಲ್ಲಿ ಮಾರಾಟವಾಗುತ್ತಿರುವ ಆರೋಪಗಳು ಕೇಳಿ ಬಂದಿವೆ. ಜಿಲ್ಲೆಯ ಆಲೂರಿನಲ್ಲಿ ಇತ್ತೀಚೆಗೆ ಪತ್ತೆಯಾದ ಎರಡು ಲಾರಿ ಅಕ್ಕಿ ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

> **ಅನ್ನಭಾಗ್ಯ ಯೋಜನೆಯಡಿ ನೀಡುತ್ತಿರುವ ಅಕ್ಕಿ ಪ್ರಮಾಣ ಹೆಚ್ಚಿದೆ. ಆದ್ದರಿಂದ ಇಂದಿರಾ ಗಾಂಧಿ ಆಹಾರ ಕಿಟ್ ನೀಡಲು ನಿರ್ಧರಿಸಲಾಗಿದೆ. ಪ್ರಕ್ರಿಯೆ ಟೆಂಡರ್ ಹಂತದಲ್ಲಿದ್ದು, ಒಂದು ತಿಂಗಳಲ್ಲಿ ಕಾರ್ಯರೂಪಕ್ಕೆ ಬರಲಿದೆ. ಆ ಬಳಿಕ ಅಕ್ರಮ ಅಕ್ಕಿ ಸಾಗಾಟ ಸ್ಥಗಿತವಾಗಬಹುದು.**
> **-ಕೆ.ಹೆಚ್.ಮುನಿಯಪ್ಪ, ಆಹಾರ ಸಚಿವ**

# ರಾಜ್ಯದ ಅಭಿವೃದ್ಧಿ ಶೂನ್ಯ: ಸಾವಿರಾರು ಸಮಸ್ಯೆ ಉಲ್ಬಣ

» ಮೊದಲನೇ ಪುಟದಿಂದ

ಅಲ್ಪಸಂಖ್ಯಾತರಿಗೆ 718 ಕೋ.ರೂ. ಒನ್ ಟೈಮ್ ಸೆಟಲ್‌ಮೆಂಟ್ ಮಾಡಿರುವುದು ಸ್ವಾಗತ. ಆದರೆ, ದಲಿತರು, ರೈತರು, ಹಿಂದುಳಿದ ವರ್ಗಗಳು, ರೈತರು ಹಾಗು ಸ್ವಸಹಾಯ ಸಂಘಗಳಿಗೆ ಏಕೆ ಒನ್ ಟೈಂ ಸೆಟಲ್‌ಮೆಂಟ್ ಮಾಡಿಲ್ಲ. ರೈತರು ಹಾಗು ಬಡ್ಡಿ ಹೊರೆ ಹೊತ್ತಿರುವ ಸ್ವಸಹಾಯ ಸಂಘಗಳಿಗೆ ಸಹ ಬಡ್ಡಿ ಮನ್ನಾ ಮಾಡಬೇಕೆಂದು ಒತ್ತಾಯಿಸಿದರು.

ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ಉಂಟಾಗಿದೆ. ಅಧಿಕಾರ ನಾನು ಕೊಡಲ್ಲ, ನಾನು ಬಿಡಲ್ಲ ಎಂಬ ಜಂಜಾಟ ನಡೆಯುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದೇ ಕಾರಣಕ್ಕೂ ಅಧಿಕಾರ ಬಿಡಲ್ಲ ಎನ್ನುತ್ತಾರೆ. ಡಿ.ಕೆ.ಶಿವ ಕುಮಾರ್ ಅವರು ಅಧಿಕಾರ ಕಿತ್ತು ಕೊಳ್ಳುತ್ತೇನೆ ಎನ್ನುತ್ತಾರೆ ಎಂದು ಟೀಕಿಸಿದರು.

30 ಶಾಸಕರು ಕುಟುಂಬ ಸಮೇತರಾಗಿ ವಿದೇಶ ಪ್ರವಾಸಕ್ಕೆ ತೆರಳುತ್ತಿರುವ ವಿಚಾರ ಪ್ರಶ್ನಿಸಿ, ಅದು ವೈಯಕ್ತಿಕ ಹಣವೇ ಅಥವಾ ಸರ್ಕಾರದ ಹಣವೇ ಎಂಬುದರಲ್ಲಿ ಗೊಂದಲ ಇದೆ. ವಿದೇಶಕ್ಕೆ ಹೋಗಿ ಏನು ಕಲಿತು ಬಂದು ಇಲ್ಲಿ ಜಾರಿಗೊಳಿಸುತ್ತೀರಿ ಎಂದು ಪ್ರಶ್ನಿಸಿದ ಅವರು, ಶಕ್ತಿ ಯೋಜನೆ ಜಾರಿಗೆ ತಂದ ಬಳಿಕ ಸಾರಿಗೆ ಇಲಾಖೆಗೆ ಆರ್ಥಿಕ ಸಂಕಷ್ಟ ಎದುರಾಗಿದೆ. ಹಳೆಯ ಬಸ್‌ಗಳನ್ನು ರಸ್ತೆಗಿಳಿಸಲಾಗಿದ್ದು, ಸರಿ ಯಾದ ಸೇವೆ ಸಿಗುತ್ತಿಲ್ಲವೆಂದು ದೂರಿದರು.

ಇಂದಿರಾ ಕಿಟ್ ವಿತರಣೆ ವಿಳಂಬವಾಗಿದೆ. ರೈತರ ಸಮಸ್ಯೆಗಳನ್ನು ಸರ್ಕಾರ ನಿರ್ಲಕ್ಷ್ಯ ಮಾಡಿದೆ. ಆದರೆ, ಜಾಹೀರಾತುಗಳಿಗೆ ಹೆಚ್ಚು ಒತ್ತು ನೀಡುವ ಮೂಲಕ ಸರ್ಕಾರ ವೈಫಲ್ಯ ಮುಚ್ಚಿಕೊಳ್ಳಲು ಮುಂದಾಗಿದೆ. ಕೆಲಸ ಮಾಡದೆ ಜಾಹೀರಾತುಗಳಲ್ಲಿ ಒಳ್ಳೆಯ ಹೆಸರು ಪಡೆಯಲು ಸಾಧ್ಯವಿಲ್ಲ. ರಾಜ್ಯದ ಜನರಿಗೆ ಈ ಸರ್ಕಾರ ಹೊರೆಯಾಗುತ್ತಿದೆ ಎಂದು ಹೇಳಿದರು.

> **ನಾವು ಗೌರವಿಸಿದಂತೆ ಅವರು ಗೌರವಿಸಲಿ**
> **ಮುಂದಿನ ಚುನಾವಣೆಗಳ ಮೈತ್ರಿ ಕುರಿತು ಅಂತಿಮ ತೀರ್ಮಾನವನ್ನು ಕೇಂದ್ರದ ವರಿಷ್ಠರು ತೆಗೆದುಕೊಳ್ಳಲಿದ್ದಾರೆ. ಜೆಡಿಎಸ್ ಈ ಬಗ್ಗೆ ಅನಾವಶ್ಯಕ ಚರ್ಚೆ ಮಾಡುವ ಅಗತ್ಯವಿಲ್ಲ. ನಾವು ಅವರನ್ನು ಗೌರವಿಸುವಷ್ಟೇ ಅವರು ನಮ್ಮನ್ನು ಗೌರವಿಸಬೇಕು. ಟಿಕೆಟ್ ನೀಡುವ ಅಧಿಕಾರ ಸ್ಥಳೀಯ ಮಟ್ಟದಲ್ಲಿ ಯಾರಿಗೂ ಇಲ್ಲ. ಅದು ಮೇಲ್ಮಟ್ಟದಲ್ಲಿ, ಹೈಕಮಾಂಡ್ ನಿರ್ಧಾರದಂತೆ ನಡೆಯುತ್ತದೆ. ಯಾವುದೇ ಸಣ್ಣ ಕಾರಣಗಳನ್ನು ಇಟ್ಟುಕೊಂಡು ಹೇಳಿಕೆ ನೀಡುವುದು ಸೂಕ್ತವಲ್ಲವೆಂದು ಹೇಳಿದರು.**

**ಕಾಂಗ್ರೆಸ್‌ಗೆ ಕರ್ನಾಟಕ ಎಟಿಎಂ**

ದೇಶದಲ್ಲಿ ಕಾಂಗ್ರೆಸ್ ಕೇವಲ ಮೂರು ರಾಜ್ಯಗಳಲ್ಲಿ ಮಾತ್ರ ಅಧಿಕಾ ರದಲ್ಲಿದೆ. ಕರ್ನಾಟಕವನ್ನು ಎಟಿಎಂ ಮಾಡಿಕೊಂಡು ಇತರೆ ರಾಜ್ಯಗಳ ಚುನಾವಣೆಗೆ ಹಣ ಹರಿಸಲಾಗುತ್ತಿದೆ. ಅಬಕಾರಿ ಇಲಾಖೆಯಲ್ಲಿ 6000 ಕೋ. ರೂ. ಹಗರಣ ನಡೆದಿದ್ದು, ಈ ವಿಚಾರ ದಲ್ಲಿ ಸರ್ಕಾರ ಸಂಕಷ್ಟಕ್ಕೆ ಸಿಲುಕಿದೆ. ವಿಶೇಷ ಅಧಿವೇಶನ ಕರೆದಿದ್ದು, 30 ರಿಂದ 40 ಕೋ. ರೂ. ವೆಚ್ಚವಾಗಿದೆ. ಆ ಹಣವನ್ನು ಬಡವರಿಗೆ ನೀಡಬಹುದಿತ್ತು ಎಂದರು.

1982ರಿಂದ ಸಿದ್ದರಾಮಯ್ಯ ಅವರನ್ನು ನೋಡುತ್ತಿದ್ದೇನೆ. ಆಗಿನ ಸಿದ್ದರಾಮಯ್ಯ ಮತ್ತು ಈಗಿನ ಸಿದ್ದರಾಮಯ್ಯ ನಡುವೆ ವ್ಯತ್ಯಾಸ ಇದೆ. ಕಾಂಗ್ರೆಸ್ ನೆಲಕಚ್ಚುತ್ತಿದೆ. ಈಗ ಚುನಾವಣೆ ನಡೆದರೂ ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ. ಕೆಲವು ಎಡಪಂಥೀಯ ಸಂಘಟನೆಗಳೊಂದಿಗೆ ಒಪ್ಪಂದ ಮಾಡಿಕೊಂಡು ರಾಜಕೀಯ ಲಾಭ ಪಡೆಯಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ ಎಂದು ಟೀಕಿಸಿದರು.

2028ರಲ್ಲಿ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗುತ್ತಾರೆ ಎಂಬ ನಿಖಿಲ್ ಕುಮಾರಸ್ವಾಮಿ ಅವರ ಹೇಳಿಕೆ ಕುರಿತು ಪ್ರಶ್ನೆಗೆ ಉತ್ತರಿಸಿದ ಅವರು, ಜನತಾದಳ 113 ಸ್ಥಾನ ಗೆದ್ದರೆ ಯಾರು ಬೇಕಾದರೂ ಮುಖ್ಯಮಂತ್ರಿ ಆಗಬಹುದು. ಅದನ್ನು ತಡೆಯಲು ನಾವು ಯಾರು, ಅದೇ ರೀತಿ ನಾವು 113 ಗೆದ್ದರೆ ನಮ್ಮವರೇ ಮುಖ್ಯಮಂತ್ರಿ ಆಗುತ್ತಾರೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಮಾಜಿ ಅಧ್ಯಕ್ಷ ರೇಣು ಕುಮಾರ್, ಪ್ರಧಾನ ಕಾರ್ಯದರ್ಶಿ ಗಿರೀಶ್, ರೈತಮೋರ್ಚಾ ಜಿಲ್ಲಾಧ್ಯಕ್ಷ ನಾರಾಯಣಗೌಡ ಇದ್ದರು.

## ಆಧುನಿಕ ಯಂತ್ರೋಪಕರಣಗಳ ಲಗ್ಗೆ | ಮೂಲ ಕೃಷಿ ಪದ್ಧತಿ ಮಾಯ

# ಇತಿಹಾಸ ಪುಟ ಸೇರಿದ ರೈತ ಮಿತ್ರ ರೋಣಗಲ್ಲು

-ಆರ್.ಶ್ರೀನಿವಾಸ್ ಉಳ್ಳಾವಳ್ಳಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪೂರ್ವ ಕಾಲದಿಂದಲೂ ರಾಗಿ, ಭತ್ತ ಹಾಗು ಇತರೆ ಧಾನ್ಯಗಳನ್ನು ಒಕ್ಕಣೆ ಮಾಡಲು ಬಳಸುತ್ತಿದ್ದ ರೈತನ ಮಿತ್ರ ಎಂದೇ ಪ್ರಾಮುಖ್ಯತೆ ಪಡೆದಿದ್ದ ರೋಣಗಲ್ಲು (ರೋಣ ಕಲ್ಲು) ಆಧುನಿಕತೆ ಬೆಳೆದಂತೆ ಇತಿಹಾಸದ ಪುಟ ಸೇರಿದೆ.

ಯುವ ಪೀಳಿಗೆಗೆ ರೋಣಗಲನ್ನು ಪ್ರಾತ್ಯಕ್ಷಿಕೆಯಾಗಿ ಪರಿಚಯಿಸುವ ಪರಿಸ್ಥಿತಿ ನಿರ್ಮಾಣ ವಾಗಿದೆ. ಪೂರ್ವಜರು ಮೂಲ ಕೃಷಿ ಪದ್ಧತಿ ಅನುಸರಿಸಿಕೊಂಡಿದ್ದ ವೇಳೆ ಪ್ರತಿ ಮನೆಗೆ ಒಂದರಂತೆ ರೋಣ ಗಲ್ಲು ಇರುತ್ತಿದ್ದದ್ದು ವಿಶೇಷ. ಜಮೀನಿನ ಬದುವಿನಲ್ಲಿ ರೋಣಗಲ್ಲುವೊಂದನ್ನು ನಿಲ್ಲಿಸಲಾಗಿದೆಯೆಂದರೆ ಆತ ಜಮೀನ್ದಾರ ಎಂದರ್ಥ. ರಾಗಿ ಹಾಗು ಇತರ ಧಾನ್ಯಗಳನ್ನು ಬೆಳೆಯುವ ರೈತ ರೋಣ ಗಲ್ಲನ್ನು ಕಡ್ಡಾಯವಾಗಿ ಹೊಂದಿರುತ್ತಿದ್ದ. ಜೊತೆಗೆ ಅಂತಹ ದೊಡ್ಡ ದಾದ ರೋಣಗಲ್ಲನ್ನು ಎಳೆಯಬೇಕೆಂದರೆ ಅಥವಾ ಒಕ್ಕಣೆ ಕಾರ್ಯದಲ್ಲಿ ಬಳಸಬೇಕೆಂದರೆ ಅಷ್ಟೇ ಸಾಮರ್ಥ್ಯದ ಎತ್ತುಗಳನ್ನು ಕಟ್ಟಿರುತ್ತಾನೆಂಬುದು ಖಚಿತವಾಗುತ್ತಿತ್ತು.

ಇತ್ತೀಚಿನ ದಿನಗಳಲ್ಲಿ ಅಂತಹ ರೋಣ ಕಲ್ಲು ಎಂಬ ಸಾಧನವನ್ನು ಹುಡುಕಿದರೂ ಸಿಗುವುದು ಅಪರೂಪವಾಗಿದೆ. ಅದರ ಬಳಕೆ ಕಡಿಮೆಯಾದಂತೆಲ್ಲ ಅವುಗಳನ್ನು ಒಡೆದು ತುಂಡರಿಸಿ ತಳ ಹದಿಗೆ ಹಾಕುವುದು, ಜಮೀನಿನ ಹಳ್ಳದ ಬದಿಗೆ ಅಣೆಕಟ್ಟು ನಿರ್ಮಿಸಲು ಇಲ್ಲವೇ ಹಳ್ಳ-ಗುಂಡಿ ಪ್ರದೇಶಕ್ಕೆ ನೂಕಲಾಗುತ್ತಿದೆ.



ಕಳೆದ 10-15 ವರ್ಷಗಳ ಹಿಂದೆ ರಾಗಿ, ಭಕ್ತ ಕಟಾವು ಕಾರ್ಯ ಮುಗಿದ ನಂತರ ಸಮ್ಮತಟ್ಟು ಜಾಗದಲ್ಲಿ ಒಕ್ಕಣೆ ಸಲುವಾಗಿ ಗುದ್ದಲಿಗಳಿಂದ ಕೆತ್ತಿ ನೆಲ ಸಮ್ಮದಟ್ಟುಗೊಳಿಸಿ ತಪ್ಪೆಯ ಬಗಡ ಹಾಕಿ ಸಾರಿಸಿ ಕಣ ಸಿದ್ಧಪಡಿಸುತ್ತಿದ್ದರು. ನಂತರದ ದಿನಗಳಲ್ಲಿ ಕಣದಲ್ಲಿ ತೆನೆ ಸಹಿತ ರಾಗಿ ಹುಲ್ಲನ್ನು ಹರಡಿ ಬಲವಾದ ಎತ್ತುಗಳ ಸಹಾಯದಿಂದ ರೋಣಗಲ್ಲನ್ನು ಎಳೆಸುವ ಮೂಲಕ ಒಕ್ಕಣೆ ಮಾಡುತ್ತಿದ್ದರು. ಅದರಿಂದ ರಾಗಿ, ಭತ್ತ ಹಾಗು ಧಾನ್ಯಗಳು ಕಲ್ಲು, ಮಣ್ಣು, ಮಸಿ ಇಲ್ಲದಂತೆ ಶುದ್ಧಗೊಳಿಸಿ ಚೀಲಗಳಲ್ಲಿ ಅಥವಾ ಕಣಜಗಳಿಗೆ ತುಂಬಿ ಸಂಗ್ರಹಿಸುತ್ತಿದ್ದರು. ಒಕ್ಕಣೆ ಸಮಯದಲ್ಲಿ ರೋಣ ಗಲ್ಲನ್ನು ಹೊಂದಿಲ್ಲದಿದ್ದರೆ ದವಸ ಧಾನ್ಯಗಳನ್ನು ಒಕ್ಕಣೆಗೊಳಿಸಿ ಮನೆಗೆ ಸಾಗಿಸಲು ಸಾಧ್ಯವಾಗದೆ ಪರದಾಡಬೇಕಾದ ಪರಿಸ್ಥಿತಿನಿರ್ಮಾಣವಾಗುತ್ತಿತ್ತು. ಆಧುನಿಕ ಯಂತ್ರೋಪಕರಣಗಳು ಬಂದ ಮೇಲೆ ರೋಣಗಲ್ಲಿನತ್ತಾ ತಿರುಗಿ ನೋಡುವವರು ಇಲ್ಲದಾಗಿದೆ.

> **ರೋಣಗಲ್ಲು ಎಂಬ ಪದ ಯುವ ಪೀಳಿಗೆಗೆ ತಿಳಿದಿರಲು ಸಾಧ್ಯವಿಲ್ಲ. ಒಕ್ಕಣೆ ಕಾರ್ಯದಲ್ಲಿ ಹೆಚ್ಚು ಸಹಕಾರಿಯಾಗುತ್ತಿದ್ದ ಯಂತ್ರ ಎಂದರೆ ತಪ್ಪಾಗಲಾರದು. ಆದರೆ, ಕೃಷಿ ಚಟುವಟಿಕೆಯಲ್ಲಿ ಯಂತ್ರೋಪಕರಣಗಳು ಪದಾರ್ಪಣೆ ಮಾಡಿದ ಬಳಿಕ ರೋಣಗಲ್ಲು ಸೇರಿ ಬಹುತೇಕ ಉಪಕರಣಗಳು ಕಣ್ಮರೆಯಾಗುತ್ತಿವೆ. ಮುಂದಿನ ದಿನಗಳಲ್ಲಿ ಮಕ್ಕಳಿಗೆ ವಸ್ತು ಪ್ರದರ್ಶನ ಇಲ್ಲವೇ ಪ್ರಾಚೀನ ವಸ್ತು ಸಂಗ್ರಹಾಲಯಗಳಲ್ಲಿ ರೋಣಗಲ್ಲನ್ನು ತೋರಿಸಬೇಕಾಗುತ್ತದೆ.**
> **-ಹೆಚ್.ಕೆ.ಗೋವಿಂದರಾಜು, ಪಿ.ಹೊಸಹಳ್ಳಿ ರೈತ**

**ರೊಣಗಲ್ಲು ಜಾಗದಲ್ಲಿ ಯಂತ್ರ**

ಇತ್ತೀಚಿನ ವರ್ಷಗಳಿಂದ ರಾಗಿ ಕಟಾವು ಯಂತ್ರ ಕಾಲಿಟ್ಟ ಬಳಿಕ ರಾಗಿ ಹಾಗು ಭತ್ತ ಕಟಾವು ಕಾರ್ಯ, ಹೊರೆ ಕಟ್ಟುವುದು, ಬೀಸಿಗೆ ಹಾಕುವುದು, ಕಣ ಮಾಡಿ ಒಕ್ಕಣೆ ಮಾಡುವುದು ತಪ್ಪಿದೆ. ಎಲ್ಲಾ ಕೆಲಸವನ್ನು ಯಂತ್ರವೊಂದೇ ಮಾಡಿ ಮುಗಿಸುತ್ತಿದೆ. ಕೈಯಲ್ಲಿ ಹಣ ಇದ್ದರೆ ಎಲ್ಲವೂ ಸಲೀಸಾಗಿದೆಯೆಂದು ರೈತ ರಾಮೇಗೌಡ ಅವರು ಅಭಿಪ್ರಾಯಪಟ್ಟರು.

ಇಂದು ನಾವು ವಾಹನಗಳನ್ನು ಖರೀದಿಸಲು ಅಥವಾ ನೋಡಲು ಶೋರೂಮ್‌ಗೆ ಹೋಗುತ್ತಿದ್ದೇವೆ. ನಮ್ಮ ಪೂರ್ವಜರು ರೋಣಗಲ್ಲು ಹಾಗು ಎತ್ತಿನ ಗಾಡಿ ಖರೀದಿಗೆ ಮಂಡ್ಯ, ತುಮಕೂರು, ರಾಮನಗರ ಕಡೆಗೆ ಪ್ರಯಾಣ ಬೆಳೆಸುತ್ತಿದ್ದರು. ಬೆವರು ಸುರಿಸಿ ದುಡಿದ ಹಣದಲ್ಲಿ ಅವುಗಳನ್ನು ಖರೀದಿಸಿ ಕೃಷಿ ಚಟುವಟಿಕೆಯಲ್ಲಿ ತೊಡಗುವುದೇ ಸಂತಸದ ವಿಚಾರವಾಗಿತ್ತು.

ಇಂದಿನ ಪೀಳಿಗೆಗೆ ರೋಣಗಲ್ಲು ಇದೆ ಎಂಬುದೇತಿಳಿದಿರುವುದಿಲ್ಲ ಎಂಬುದೇ ವಿಪರ್ಯಾಸ. ಸದ್ಯಕ್ಕೆ ವಸ್ತು ಪ್ರದರ್ಶನ ಅಥವಾ ವಸ್ತು ಸಂಗ್ರಹಾಲಯಗಳಲ್ಲಿ ರೋಣಗಲ್ಲನ್ನು ಪ್ರದರ್ಶನಕ್ಕೆ ಇಡಬೇಕಾದ ದಿನಗಳು ಹತ್ತಿರವಾಗುತ್ತಿವೆ ಎಂಬುದು ಹಿರಿಯರ ಮಾತಾಗಿದೆ.

> **ಹಿಂದೆ ಹತ್ತಾರು ಕುಟುಂಬಗಳು ಸೇರಿ ಒಂದೆಡೆ ಕಣ ನಿರ್ಮಿಸಿ ಒಕ್ಕಣೆ ಕಾರ್ಯದಲ್ಲಿ ತಿಂಗಳುಗಟ್ಟಲೇ ತೊಡಗಿಕೊಳ್ಳುತ್ತಿದ್ದರು. ಶ್ರಮವಹಿಸಿ ಕೆಲಸ ಮಾಡುತ್ತಿದ್ದರಿಂದ ಆರೋಗ್ಯವಂತರಾ ಗಿದ್ದರು. ಈಗ ಕೃಷಿಯಲ್ಲಿ ತಂತ್ರಜ್ಞಾನ ಬಂದ ನಂತರ ಆಹಾರ ಪದ್ಧತಿ ಹಾಗು ಜೀವನ ಶೈಲಿ ಬದಲಾಗಿದೆ. ಹೀಗಾಗಿ ಮನುಷ್ಯ ಅನಾರೋಗ್ಯಕ್ಕೀಡಾಗುತ್ತಿದ್ದಾನೆ.**
> **-ಮಲ್ಲಿಕಾರ್ಜುನ, ರೈತ**

## ಶಿಷ್ಯತ್ವ ಸ್ವೀಕಾರ ಸಮಾರಂಭ: ಫೆ.16ಕ್ಕೆ ಪೂರ್ವಭಾವಿ ಸಭೆ

• ಪ್ರಜೋದಯ ವರದಿ

**ಹಾಸನ:** ಅರಕಲಗೂಡು ತಾಲ್ಲೂಕು ಅರೇಮಾದನಹಳ್ಳಿಯ ವಿಶ್ವಕರ್ಮ ಮಠದಲ್ಲಿ ಫೆ.25 ಹಾಗು 26ರಂದು ಹಮ್ಮಿಕೊಂಡಿರುವ ಸನ್ಯಾಸ ದೀಕ್ಷೆ ಹಾಗು ಶಿಷ್ಯತ್ವ ಸ್ವೀಕಾರ ಸಮಾರಂಭದ ಅಂಗವಾಗಿ ಫೆ.16ರ ಸೋಮವಾರ ಸಂಜೆ 5 ಗಂಟೆಗೆ ನಗರದ ಕಾಳಿಕಾಂಬ ಕಮಠೇಶ್ವರ ದೇವಾಲಯದ ವಿಶ್ವಕರ್ಮ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ.

ಸಭೆಯ ದಿವ್ಯ ಸಾನಿಧ್ಯವನ್ನು ಶ್ರೀಮಠದ ಶಿವಸುಜ್ಞಾನತೀರ್ಥ ಸ್ವಾಮೀಜಿ ವಹಿಸುವರು. ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಹೆಚ್.ಬಿ. ಕುಮಾರಾಚಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಭೆಯಲ್ಲಿ ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಹೆಚ್.ವಿ.ಹರೀಶ್ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆಂದು ತಾಲ್ಲೂಕು ವಿಶ್ವಕರ್ಮ ಸಮಾಜದ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಆನಂದ್ ತಿಳಿಸಿದ್ದಾರೆ.

## ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ: ಅಂಗಡಿಗಳ ಮೇಲೆ ದಾಳಿ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದ ವಿವಿಧ ಅಂಗಡಿಗಳ ಮೇಲೆ ಪೊಲೀಸರ ನೆರವಿನೊಂದಿಗೆ ದಿಢೀರ್ ದಾಳಿ ನಡೆಸಿದ ತಂಬಾಕು ನಿಯಂತ್ರಣ ಅಧಿಕಾರಿಗಳು 42 ಪ್ರಕರಣ ಪತ್ತೆ ಹಚ್ಚಿದ್ದಾರೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರ ನಿರ್ದೇಶನದ ಮೇರೆಗೆ ಜಂಟಿ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಕೆಎಸ್‌ಆರ್‌ಟಿಸಿ ಹೊಸ ಬಸ್ ನಿಲ್ದಾಣ, ಹಳೆ ಬಸ್ ನಿಲ್ದಾಣ, ಪುರಸಭೆ ಆವರಣದ ವಾಣಿಜ್ಯ ಸಂಕೀರ್ಣ, ಸಾರ್ವಜನಿಕ ಆಸ್ಪತ್ರೆ ಮುಂಭಾಗದ ಕೆಲವು ಅಂಗಡಿಗಳ ಮೇಲೆ ದಾಳಿ ನಡೆಸಿ 42 ಪ್ರಕರಣಗಳಿಂದ 4,200 ರೂ.ದಂಡ ವಿಧಿಸಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ 18 ವರ್ಷದೊಳಗಿನ ಮಕ್ಕಳು ತಂಬಾಕು ಸೇವನೆ ಮಾಡದಂತೆ ಸೂಚಿಸುವ 60X30 ರ ಅಳತೆಯ ನಾಮಫಲಕ ಅಂಗಡಿಗಳಲ್ಲಿ ಪ್ರದರ್ಶನ ಮಾಡುವಂತೆ ಸೂಚಿಸಿದರು. ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡುವ ಜವಾಬ್ದಾರಿ ಪ್ರತಿಯೊಬ್ಬರ ಕರ್ತವ್ಯ. ನಿಯಮ ಮೀರಿ ಮಾರಾಟ ಮಾಡುವವರ ವಿರುದ್ಧ ಕಾನೂನು ಪ್ರಕಾರ ದಂಡ ವಿಧಿಸಲಾಗಿದೆ. ಈ ದಾಳಿ ನಿರಂತರವಾಗಿ ಮುಂದುವರೆಯುತ್ತದೆ. ತಂಬಾಕು ಮಾರಾಟ ಸಂಪೂರ್ಣ ಸ್ಥಗಿತಗೊಳಿಸಲು ಕ್ರಮಕೈಗೊಳ್ಳಲಾಗುತ್ತದೆಂದು ಅಧಿಕಾರಿಗಳು ತಿಳಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯ ಮಮತಾ, ಲೆಕ್ಕಪರಿಶೋಧಕ ಸುರೇಶ್, ತಾಲ್ಲೂಕು ಆರೋಗ್ಯ ಇಲಾಖೆಯ ಹಿರಿಯ ನಿರೀಕ್ಷಕ ಶಿವಲಿಂಗಯ್ಯ, ನಗರ ಠಾಣೆಯ ಎಎಸ್‌ಐ ಹೆಚ್.ಪಿ. ಜಯರಾಮ್, ಸಿಬ್ಬಂದಿ ಬಿ.ಇ.ವಾಣಿ, ಗೃಹರಕ್ಷಕ ದಳದ ವಿನೋದಮ್ಮ ಇತರರಿದ್ದರು.

# ಕಾಡಾನೆ-ಮಾನವ ಹೊಂದಾಣಿಕೆಗಾಗಿ ಜಾಗೃತಿ

## ಪ್ರತಿಯೊಬ್ಬರ ಪ್ರಾಣ ಅಮೂಲ್ಯ, ನಮ್ಮೊಂದಿಗೆ ಸಹಕರಿಸಿ: ಸೌರಭ್ ಕುಮಾರ್

• ಪ್ರಜೋದಯ ವರದಿ

**ಅರೇಹಳ್ಳಿ:** ಬೆಲೆ ಕಟ್ಟಲಾಗದ ನಿಮ್ಮೆಲ್ಲರ ಪ್ರಾಣ ಅಮೂಲ್ಯ. ಜೀವನೋಪಾಯಕ್ಕಾಗಿ ತೋಟ-ಗದ್ದೆಗಳಲ್ಲಿ ಕಷ್ಟಪಟ್ಟು ಕೂಲಿ ಕೆಲಸ ಮಾಡುತ್ತಿರುವ ನೀವು, ಕಾಡಾನೆಗಳಿಂದ ಸಂಭವಿಸಬಹುದಾದ ಸಂಘರ್ಷವನ್ನು ನಿಯಂತ್ರಿಸಲು ನಮ್ಮೊಂದಿಗೆ ಸಹಕರಿಸಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್ ಅವರು ಮನವಿ ಮಾಡಿದರು.

ಅರೇಹಳ್ಳಿ ಹೋಬಳಿ ವ್ಯಾಪ್ತಿಯ ಉತ್ತೊಳಲು ಎಸ್ಟೇಟ್ ಆವರಣದಲ್ಲಿ ನೇಚರ್ ಕನ್ಸರ್ವೇಶನ್ ಫೌಂಡೇಶನ್, ಅರಣ್ಯ ಇಲಾಖೆಯ ವತಿಯಿಂದ ಆಯೋಜಿಸಿದ್ದ 'ಆನೆ-ಮಾನವ ಹೊಂದಾಣಿಕೆ' ಕುರಿತ ಜಾಗೃತಿ ಬೀದಿ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದರು.

ನಮ್ಮ ಜೀವಕ್ಕೆ ಬೆಲೆ ಕಟ್ಟಲಾಗದು. ಕಳೆದುಕೊಂಡ ಪ್ರಾಣವನ್ನು ಮತ್ತೆ ಪಡೆಯಲು ಸಾಧ್ಯ ವಿಲ್ಲ. ಆದ್ದರಿಂದ ನಮ್ಮ ಜೀವ ಕಾಪಾಡಿಕೊಳ್ಳಲು ಜಾಗೃತಿ ಅತ್ಯವಶ್ಯಕ. ಕೆಲವರು ಜೀವನೋ ಪಾಯಕ್ಕಾಗಿ ಊರು ಬಿಟ್ಟು ಇಲ್ಲಿ ವಲಸೆ ಬಂದಿದ್ದೀರಿ.



ನಿಮ್ಮ ಪ್ರಾಣ ನಮಗೂ ಅಷ್ಟೇ ಮುಖ್ಯ. ತೋಟ-ಗದ್ದೆಗಳಿಗೆ ಕೆಲಸಕ್ಕೆ ತೆರಳುವ ಮೊದಲು ಕಾಡಾನೆಗಳ ಚಲನವಲನಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು. ನಿಮ್ಮ ಬಳಿ ಇಟಿಎಫ್ ತುರ್ತು ಸಹಾಯವಾಣಿ ಸಂಖ್ಯೆಯನ್ನು ಸದಾ ಇಟ್ಟುಕೊಳ್ಳಬೇಕು. ನಿಮ್ಮ ಪರಿಸರದಲ್ಲಿ ಕಾಡುಪ್ರಾಣಿಗಳ ಸುಳಿವು ಸಿಕ್ಕರೆ ತಕ್ಷಣ ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡಬೇಕು ಎಂದು ಕಾರ್ಮಿಕರಿಗೆ ಸಲಹೆ ನೀಡಿದರು.

ಕಾಡುಪ್ರಾಣಿಗಳು ಕಾಡನ್ನು ತೊರೆದು ಊರಿಗೆ ಬರಲು ಕಾರಣಗಳು ಏನು. ಅವುಗಳಿಂದ ಹೇಗೆ ರಕ್ಷಿಸಿಕೊಳ್ಳಬೇಕು. ಕಾಡಾನೆಗಳನ್ನು ಕಂಡಾಗ ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಕಾಡಾನೆ ಮಾನವ ಸಂಘರ್ಷ ನಿಯಂತ್ರಣಕ್ಕೆ ಅರಣ್ಯ ಇಲಾಖೆ ಯಾವ ಕ್ರಮ ಗಳನ್ನು ಜಾರಿಗೊಳಿಸಿದೆ ಎಂಬ ವಿಷಯಗಳ ಕುರಿತು ಎಐ ಆಧಾರಿತ ವಿಡಿಯೋ ಪ್ರದರ್ಶನ ಹಾಗು ಬೀದಿ ನಾಟಕದ ಮೂಲಕ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಎನ್‌ಸಿಎಫ್‌ನ ಹಿರಿಯ ವಿಜ್ಞಾನಿ ಆನಂದ್ ಕುಮಾರ್, ಕ್ಷೇತ್ರ ಸಂಯೋಜಕ ದೀಪಕ್ ಭಟ್, ಯೋಜನಾ ಸಂಯೋಜಕ ನಿಸಾರ್ ಅಹಮದ್, ಎಸಿಎಫ್ ಮೋಹನ್ ಹಾಗೂ ಮಧುಸೂದನ್, ಆರ್‌ಎಫ್‌ಒ ಯತೀಶ್, ಪೃಥ್ವಿ ಟ್ರಸ್ಟ್‌ನ ಯೋಗಾನಂದ, ಮಾಧೇಸ್ವಾಮಿ, ಜಾಗೃತಿ ಕುಮಾರ್, ಸ್ವಪ್ನ, ಸಿಂಚನ, ಅನುಶ್ರೀ ಉಪಸ್ಥಿತರಿದ್ದರು.

## ಕಾರಣವಿಲ್ಲದೆ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ

**ಬೇಲೂರು:** ರಸ್ತೆ ಬದಿ ನಿಂತಿದ್ದ ವ್ಯಕ್ತಿಯೊಬ್ಬರ ಜೊತೆಗೆ ವಿನಾಃ ಕಾರಣ ಜಗಳ ಮಾಡಿಕೊಂಡ ಮೂವರು ಯುವಕರು ಮಾರಣಾಂತಿಕ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ತಾಲ್ಲೂಕಿನ ಅರಗೂರು-ಹುಲಿಕಲ್‌ನ ವೀರಭದ್ರೇಶ್ವರ ಬೇಕರಿ ಸಮೀಪ ನಡೆದಿದೆ.

ಅಡಗೂರಿನ ಚಂದ್ರಶೇಖರ ಗಾಯಾಳು. ಅವರು ತಮ್ಮ ಪುತ್ರಿಯ ಲಗ್ನ ಪತ್ರಿಕೆ ಹಂಚಲು ಬೈಕ್‌ನಲ್ಲಿ ಹೋಗುತ್ತಿದ್ದಾಗ ಬೇಕರಿ ಸಮೀಪ ನಿಂತಿದ್ದರು. ಆಗ ಅಲ್ಲಿಗೆ ಬಂದ ಮೂವರು ಅಪರಿಚಿತರು ಬೈಕ್ ಸುತ್ತುವರಿದು ಹುಚ್ಚಾಟ ಪ್ರದರ್ಶಿಸಿದ್ದಾರೆ. ಚಂದ್ರಶೇಖರ ಅವರು ಪ್ರಶ್ನಿಸುತ್ತಿದ್ದಂತೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಏಕಾಏಕಿ ಮಾರಕಾಸ್ತ್ರಗಳಿಂದ ಹೊಡೆದಿದ್ದಾರೆ. ಗಾಯಾಳುವಿಗೆ ತೀವ್ರ ರಕ್ತಸ್ರಾವವಾಗುತ್ತಿದ್ದಂತೆ ತಮ್ಮ ಬೈಕ್‌ಗಳನ್ನು ಅಲ್ಲೇ ಬಿಟ್ಟು ಪರಾರಿಯಾ ಗಿದ್ದಾರೆ. ಬೇಕರಿ ಮಾಲೀಕರು ಚಂದ್ರಶೇಖರ ಅವರನ್ನು ಹಳೇಬೀಡು ಆಸ್ಪತ್ರೆಗೆ ದಾಖಲಿಸಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬೈಕ್ ಅಪಘಾತ: ವ್ಯಕ್ತಿ ಸಾವು

**ಹಾಸನ:** ನಿಯಂತ್ರಣ ತಪ್ಪಿ ಬೈಕ್ ಮೇಲಿಂದ ಬಿದ್ದ ಸವಾರ ಮೃತಪಟ್ಟಿರುವ ಘಟನೆ ಕೊಕ್ಕನ ಘಟ್ಟ ಸಮೀಪ ನಡೆದಿದೆ.

ತಾಲ್ಲೂಕಿನ ಚೌಡುವಳ್ಳಿ/ಶೆಟ್ಟಿಹಳ್ಳಿ ಪಿಎಸಿಸಿಎಸ್ ಕಾರ್ಯದರ್ಶಿ, ಕಟ್ಟಾಯ ಹೋಬಳಿ ಚೌಡೇನಹಳ್ಳಿ ಗ್ರಾಮದ ಜಯರಾಮ್ (51) ಮೃತರು. ಫೆ.11ರಂದು ಕರ್ತವ್ಯ ಮುಗಿಸಿ ರಾತ್ರಿ 8ರ ಸಮಯದಲ್ಲಿ ಮನೆಗೆ ಹೋಗುತ್ತಿದ್ದಾಗ ಆಯತಪ್ಪಿ ರಸ್ತೆ ಮೇಲೆ ಬಿದ್ದಿದ್ದಾರೆ. ಕೂಡಲೇ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

## ಪ್ರಶ್ನಿಸಿದ್ದಕ್ಕೆ ಕೆಎಂಶಿ ಹಲ್ಲೆಗೆ ಪ್ರಚೋದನೆ: ಆರೋಪ

• ಪ್ರಜೋದಯ ವರದಿ

**ಹಾಸನ:** ಗೃಹಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ತಮ್ಮ ಅಧಿಕಾರ ದುರು ಪಯೋಗ ಪಡಿಸಿಕೊಂಡು ಸಣ್ಣ ಸಮುದಾಯಗಳ ಮೇಲೆ ಗದಾ ಪ್ರಹಾರ ನಡೆಸುತ್ತಿದ್ದಾರೆಂದು ದುಮ್ಮೇನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಅಜ್ಜಪ್ಪ ಅವರು ಆರೋಪಿಸಿದರು.

ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರು ಸಾರ್ವಜನಿಕ ಸೇವಕರು. ಅವರನ್ನು ಪ್ರಶ್ನಿಸುವ ಅಧಿಕಾರ ಪ್ರತಿಯೊಬ್ಬ ನಾಗರಿಕನಿಗೂ ಇದೆ. ಪ್ರಶ್ನೆ ಕೇಳಿದ ಕಾರಣಕ್ಕೆ ಕಾರ್ಯಕರ್ತರಿಗೆ ಹಲ್ಲೆ ಮಾಡಲು ಕರೆ ನೀಡುವುದು ಅವರ ಸ್ಥಾನಕ್ಕೆ ಶೋಭೆ ತರುವುದಿಲ್ಲ ಎಂದರು.

ಸವಿತಾ ಸಮಾಜದ ಅಧ್ಯಕ್ಷ ಅರುಣ್ ಕುಮಾರ್ ಅವರನ್ನು ಸಾರ್ವಜನಿಕವಾಗಿ ಹಿಡಿದು ಹೊಡೆ ಯುವಂತೆ ಕರೆ ನೀಡಿರುವುದು ಕ್ಷೇತ್ರ ದಲ್ಲಿ ಗೂಂಡಾ ರಾಜಕಾರಣಕ್ಕೆ ನಾಂದಿ ಹಾಡಿದಂತಾಗಿದೆ. ಮಂತ್ರಿಸ್ಥಾನದ ಆಸೆಗಾಗಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾದರೂ ಸಚಿವ ಸ್ಥಾನ ಸಿಗದಿರುವುದಕ್ಕೆ ಹತಾಶರಾಗಿದ್ದಾರೆ. ಇತ್ತೀಚೆಗೆ




ಶಾಸಕರು ಮಾನಸಿಕ ಸ್ಥಿಮಿತ ಕಳೆದುಕೊಂಡಂತೆ ವರ್ತಿಸುತ್ತಿದ್ದಾರೆ. ಸಣ್ಣ ಸಮುದಾಯಗಳ ವಿರುದ್ಧ ಮುಗಿಬೀಳುತ್ತಿರುವುದು ಖಂಡನೀಯ ಎಂದರು.

ಹಿಂದುಳಿದವರ ಪರವೆಂದು ಹೇಳಿ ಮತ ಪಡೆದ ಬಳಿಕ ಡಿ.ಕೆ.ಶಿವಕುಮಾರ್ ಅವರ ಜೊತೆ ಹೋಗಿ ಹಾರ ಹಾಕಿಸಿಕೊಳ್ಳುತ್ತಾರೆ. ಸದನದಲ್ಲಿ ಬಾಯಿಗೆ ಬಂದಂತೆ ಮಾತನಾಡಿ ಗೌರವ ಹಾಳು ಮಾಡಿದ್ದಾರೆ. ಕ್ಷೇತ್ರದ ಕಾಮಗಾರಿಗಳಲ್ಲಿ ಕಮಿಷನ್ ಪಡೆಯುತ್ತಿದ್ದಾರೆಂದು ಆರೋಪಿಸಿದ ಅವರು, ಕಮಿಷನ್ ಪಡೆಯುತ್ತಿಲ್ಲವೆಂದರೆ ಜೇನುಕಲ್ ಸಿದ್ದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬಂದು ಪ್ರಮಾಣ ಮಾಡಲಿ ಎಂದು ಸವಾಲು ಹಾಕಿದರು.

ಅರಸೀಕೆರೆ ತಾಲ್ಲೂಕು ಸವಿತಾ ಸಮಾಜದಅಧ್ಯಕ್ಷ ಅರುಣ್ ಕುಮಾರ್, ಭಾಸ್ಕರ್, ಗೋಪಾಲಪುರ ರಂಗಸ್ವಾಮಿ, ಸುಪ್ರಿತ್ ಕುಮಾರ್ ಇದ್ದರು.

## ನಾಳೆ ಮೂಲ ನಿವಾಸಿ ಮುಕ್ತ ಭಾರತ ಕೃತಿ ಬಿಡುಗಡೆ

**ಹಾಸನ:** ಪತ್ರಕರ್ತ ಮಲ್ನಾಡ್ ಮೆಹಬೂಬ್ ಅವರ ಮೂಲ ನಿವಾಸಿ ಮುಕ್ತ ಭಾರತ ಕೃತಿ ಬಿಡುಗಡೆ ಸಮಾರಂಭ ಫೆ.15 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆ ಯಲಿದೆ ಎಂದು ಪತ್ರಕರ್ತ ನಾಗರಾಜ್ ಹೆತ್ತೂರು ಅವರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೃತಿಯನ್ನು ನಗರದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು ಪ್ರಾಂಶುಪಾಲರಾದ ಇರ್ಷಾದ್ ಪಾಷ್ ಅವರು ಬಿಡುಗಡೆ ಮಾಡಲಿದ್ದಾರೆ. ಆಲೂರಿನ ಕನ್ನಡ ಉಪನ್ಯಾಸಕ ರೋಹಿತ್ ಅಗಸರವಳ್ಳಿ ಕೃತಿ ಕುರಿತು ಮಾತನಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಸಾಮಾಜಿಕ ಕಾರ್ಯಕರ್ತೆ ನಜ್ಮಾ ನಜೀರ್ ಚಿಕ್ಕನೇರಳೆ, ಪ್ರಕಾಶಕರಾದ ಮಹಮ್ಮದ್ ಅಜರುದ್ದೀನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ವಹಿಸಲಿದ್ದಾರೆಂದರು.

ಸುದ್ದಿಗೋಷ್ಠಿಯಲ್ಲಿ ಲೇಖಕ ಮಲ್ನಾಡ್ ಮೆಹಬೂಬ್, ಪತ್ರಕರ್ತ ತೌಫಿಕ್ ಅಹಮದ್ ಉಪಸ್ಥಿತರಿದ್ದರು.

## ಕ್ರಿಸ್ತಜ್ಯೋತಿ ಶಾಲೆಗೆ ಅಂಟಿದ ಕಳಂಕ | ತೆರವಿಗೆ ಆಗ್ರಹ

# ಖಾಸಗಿ ಶಿಕ್ಷಣ ಸಂಸ್ಥೆ ವಿರುದ್ಧ ಕೆರೆ ಒತ್ತುವರಿ ಆರೋಪ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಕ್ರಿಸ್ತಜ್ಯೋತಿ ಶಾಲೆಯ ಆಡಳಿತ ಮಂಡಳಿ ಕೆಲ್ಲೂರು ಗ್ರಾಮದ ಸರ್ಕಾರಿ ಕೆರೆಯ ಜಾಗ ಮತ್ತು ಸಾರ್ವಜನಿಕ ಏರಿಯನ್ನು ದುರ್ಬಳಕೆ ಮಾಡಿಕೊಂಡಿದ್ದು, ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಪಂಚಾಯಿತಿ ಮಾಜಿ ಕೆಡಿಪಿ ಸದಸ್ಯ ಶಶಿಕುಮಾರ್ ಅವರು ಆಗ್ರಹಿಸಿದ್ದಾರೆ.

ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಬರುವ ಕೆಲ್ಲೂರು ಗ್ರಾಮದ ಸರ್ವೇ ನಂಬರ್ 45ರಲ್ಲಿ ಸುಮಾರು 3ಎಕರೆ 4 ಗುಂಟೆ ವಿಸ್ತೀರ್ಣದಲ್ಲಿ ಕೆರೆಯ (ಮಗೆಯುವ ಕೆರೆ)ಜಾಗವಿದ್ದು, ಈ ಖಾಸಗಿ ಶಾಲೆ ಆರಂಭಗೊಂಡ ಮೇಲೆ ಪ್ರತಿ ವರ್ಷವೂ ಹಂತ ಹಂತವಾಗಿ ಒತ್ತುವರಿಯಾಗಿ ಅವಸಾನದ ಹಂಚಿಗೆ ತಲುಪಿದೆ. ಕೆರೆಯ 2 ಭಾಗದಲ್ಲಿ ಕ್ರಿಸ್ತಜ್ಯೋತಿ ಶಾಲೆಗೆ ಸೇರಿದ ಜಮೀನು ಇದೆ. ಈ ಸಲುವಾಗಿ ಕಾಂಪೌಡ್ ನಿರ್ಮಾಣ, ರಸ್ತೆ ಹಾಗೂ ವಾಹನ ನಿಲುಗಡೆ ಸಲುವಾಗಿ ಕೆರೆಯ ಜಾಗವನ್ನು ಒತ್ತುವರಿ ಮಾಡುತ್ತಿರುವುದು ಕಂಡುಬಂದಿದೆ ಎಂದು ಆರೋಪಿಸಿದ್ದಾರೆ.

ಈ ಕೆರೆಯೂ ತುಂಬಾ ಪುರಾತನವಾಗಿದ್ದು ನಮ್ಮ ಗ್ರಾಮದ ಪೂರ್ವಿಕರೆಲ್ಲರೂ ಅಲ್ಲಿಗೆ ಹೋಗಿ ಈ ಹಿಂದೆ ಕುಡಿಯಲು ನೀರನ್ನು ತರುತ್ತಿದ್ದರು ಎಂಬ ಇತಿಹಾಸವಿದೆ. ಈಗ ಆ ಕೆರೆಯು ತುಂಬಾ ಗಲೀಜು ಆಗಿದ್ದು, ಯಾವುದಕ್ಕೂ ಉಪಯೋಗವಿಲ್ಲದೆ ತುಂಬಾ ಕೊಳಕು ಆಗಿರುತ್ತದೆ. ಅದರ ಪಕ್ಕ ಅರುವ ಕ್ರಿಸ್ತ ಜ್ಯೋತಿ ಶಾಲೆಯವರು ಆ ಕೆರೆಯನ್ನು ಒತ್ತುವರಿ ಮಾಡುತ್ತಿರುವುದಲ್ಲದೇ ಅನಗತ್ಯ ತ್ಯಾಜ್ಯವನ್ನು ಹಾಕುವುದು ಕಂಡುಬಂದಿದೆ. ಹಾಲಿ ಕೆರೆಯ ನೀರು ಸಂಪೂರ್ಣವಾಗಿ ಮಲೀನಗೊಂಡಿದೆ. ಹೀಗಿದ್ದರೂ ಕೂಡ ಕೆರೆ ಅಚ್ಚುಕಟ್ಟು ಪ್ರದೇಶದಲ್ಲಿ ಇದೇ ನೀರನ್ನು ಬಳಕೆ ಮಾಡಿಕೊಂಡು ಭತ್ತ, ಇತರೆ ಕೃಷಿಯನ್ನು ಕೈಗೊಳ್ಳುತ್ತಿದ್ದಾರೆಂದು ದೂರಿದರು.



ಈ ಖಾಸಗಿ ಶಾಲೆ ಮಕ್ಕಳು ಕೆರೆ ಏರಿ ಮೇಲೆ ನಡೆದು ಹೋಗುತ್ತಿದ್ದರು. ಆಗ ಕೆರೆ ಏರಿ ಕಿರಿದಾಗಿತ್ತು. ಹಾಲಿ ಸಾವಿರಕ್ಕೂ ಅಧಿಕ ಮಕ್ಕಳು ಓದುತ್ತಿದ್ದು, ಹತ್ತಾರು ಬಸ್‌ಗಳನ್ನು ಹೊಂದ ಲಾಗಿದೆ. ಈ ಸಲುವಾಗಿ 8 ಅಡಿ ಅಗಲವಿದ್ದ ಕೆರೆ ಏರಿ ಈಗ 20ಅಡಿ ಅಗಲವನ್ನು ಹೊಂದಿದೆ. ಅದರಿಂದಲೇ ಕೆರೆ ಜಾಗ ಸುಮಾರು ಒಂದು ಎಕರೆ ವಿಸ್ತೀರ್ಣ ರಸ್ತೆಗೆ ಬಳಕೆ ಮಾಡಿಕೊಂಡಿರುವ ಅನುಮಾನವಿದೆ. ಶಾಲೆಗೆ ತೆರಳುವ ಸಲುವಾಗಿ ಕೋಡಿಯಲ್ಲಿ ಅವೈಜ್ಞಾನಿಕ ಸೇತುವೆ ನಿರ್ಮಿಸಿರುವ ಪರಿಣಾಮ ಅರ್ಧಕೆರೆಯ ನೀರು ಅನವಶ್ಯವಾಗಿ ಪೋಲಾಗುತ್ತಿದೆ. ಅದರಿಂದ ಅಚ್ಚುಕಟ್ಟು ದಾರರಿಗೆ ತೊಂದರೆಯಾಗುತ್ತಿದೆ ಎಂದರು.

ಶಾಲೆಯಲ್ಲಿ ಬಡ ಮಕ್ಕಳಿಗೆ ಉಚಿತವಾಗಿ ಪ್ರವೇಶ ದೊರೆಯುತ್ತಿಲ್ಲ. ವಾರ್ಷಿಕವಾಗಿ ಒಂದು ಮಗುವಿಗೆ ಕನಿಷ್ಠ 60 ಸಾವಿರ ರೂ. ವಸೂಲಿ ಮಾಡಲಾಗುತ್ತಿದೆ. ಕೆಲ್ಲೂರು ಗ್ರಾಮದಲ್ಲಿ ಇರುವ ವರೆಲ್ಲರೂ ಕೂಡ ಬಡವರೇ ಆಗಿದ್ದಾರೆ. ಒಬ್ಬರಿಗೂ ಕೂಡ ಉಚಿತವಾಗಿ ಪ್ರವೇಶ ನೀಡಿಲ್ಲ. ಕೆಲ್ಲೂರು ಗ್ರಾಮದ ಕೆರೆ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕೆರೆಯು ಅರಕಲಗೂಡು ಪಟ್ಟಣಕ್ಕೆ ಸೇರಿದಾಗಿದ್ದು, ಸ್ಥಳೀಯ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಕೆರೆ ಸ್ವಚ್ಛತೆ ಬಗ್ಗೆ ಯೋಜನೆ ರೂಪಿಸಿ ಅನುಷ್ಠಾನಕ್ಕೆ ತರಬೇಕಿದೆ. ಅದಕ್ಕೂ ಮುನ್ನಾ ತಹಶೀಲ್ದಾರ್ ಅವರು ಸ್ಥಳಕ್ಕೆ ಭೇಟಿನೀಡಿ ಕೆರೆ ಒತ್ತುವರಿಯನ್ನು ಕೂಡಲೇ ಬಿಡಿಸಬೇಕು. ಅದಲ್ಲದೇ ಸರ್ವೇ ನಂಬರ್ ಜಾಗದಲ್ಲಿ ಶಾಲೆಯನ್ನು ತೆರೆಯಲು ಶಿಕ್ಷಣ ಇಲಾಖೆ ಅನುಮತಿ ನೀಡಿರುವುದು ಕೂಡ ಅಕ್ಷಮ್ಯ ಅಪರಾಧವಾಗಿದೆ. ಒಂದು ಕಡೆ ಆಳವಾದ ಕೆರೆ ಮತ್ತೊಂದು ಕಡೆ ತಗ್ಗು ಪ್ರದೇಶದಲ್ಲಿನ ಅಚ್ಚುಕಟ್ಟು ಪ್ರದೇಶವಿದೆ. ಈ ನಡುವೆ ಶಾಲಾ ಬಸ್, ಖಾಸಗಿ ವಾಹನಗಳ ಸಂಚಾರ ಮತ್ತು ಅದರೊಂದಿಗೆ ಮಕ್ಕಳ ಓಡಾಟ, ಅದನ್ನು ಕಂಡರೆ ಭಯವಾಗುತ್ತದೆ. ತುಂಬಾ ಅಪಾಯದಲ್ಲಿ ಶಾಲಾ ಮಕ್ಕಳು ಸಂಚರಿಸುತ್ತಾರೆ. ಮಕ್ಕಳ ಹಿತ ದೃಷ್ಟಿ ಮತ್ತು ಸರ್ಕಾರಿ ಕೆರೆ ಸಂರಕ್ಷಣೆ ಸಲುವಾಗಿ ಕ್ರಿಸ್ತಜ್ಯೋತಿ ಶಾಲೆಯ ಮಾನ್ಯತೆಯನ್ನು ಮತ್ತೊಮ್ಮೆ ಪರಿಶೀಲನೆ ನಡೆಸಬೇಕೆಂದು ಮನವಿ ಮಾಡಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019